
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ

ಸಂಪುಟ : 37 ಸಂಚಿಕೆ : 18 ದುರ್ಮುಖಿ–ವೃಷಭ ಕಲಿಯುಗಾಬ್ದ 5117 1–5–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## ಕಾಡು ಬೆಳೆಸಿದ ಕಲಿಗಳು

ಬೇಸಿಗೆಯ ಬಿರುಬಿಸಿಲು ಎಲ್ಲರನ್ನೂ ಸುಡುತ್ತಿದೆ. ಮೊದಲೆಲ್ಲಾ 32 ಡಿಗ್ರಿ ಸೆಲ್ಷಿಯಸ್ ದಾಟದಿರುತ್ತಿದ್ದ ಪ್ರದೇಶಗಳಲ್ಲೂ ಉಷ್ಣಾಂಶ 37 ಡಿಗ್ರಿಯನ್ನೂ ದಾಟುತ್ತಿರುವುದು ನಮ್ಮ ಅನುಭವಕ್ಕೆ ಬರುತ್ತಿದೆ. ತಾಪಮಾನ ಏರಿಕೆಯೊಂದೇ ಅಲ್ಲದೇ, ಹೆಚ್ಚುತ್ತಿರುವ ಇಂಗಾಲದ ಡೈ ಆಕ್ಸೈಡ್ ಪ್ರಮಾಣ, ಮಳೆ ಪ್ರಮಾಣದಲ್ಲಿ ಇಳಿಕೆ, ಶುದ್ಧ ಕುಡಿಯುವ ನೀರಿನ ಸಮಸ್ಯೆ, ವಾಹನ, ಕೈಗಾರಿಕೆಗಳಿಂದ ವಾಯುಮಾಲಿನ್ಯ ಇವೆಲ್ಲ ಇಂದು ನಾವು ಎದುರಿಸುತ್ತಿರುವ ಅತಿದೊಡ್ಡ ಸವಾಲುಗಳಾಗಿವೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲ ಸಾಮರ್ಥ್ಯವಿರುವುದು ಮರ–ಗಿಡಗಳಿಗೆ, ಅರಣ್ಯಗಳಿಗೆ. ಜನಸಂಖ್ಯೆ, ಕೈಗಾರಿಕೋದ್ಯಮ ಹೆಚ್ಚುತ್ತಿರುವ ವೇಗದಲ್ಲೇ ಹಸಿರನ್ನು ಉಳಿಸುವ ಹಾಗೂ ಬೆಳೆಸುವ ಕೆಲಸವೂ ಆಗಬೇಕಿದೆ. ಈಗಿನ ಅರಣ್ಯದ ವಿಸ್ತೀರ್ಣ ಸರಿ ಸುಮಾರು 79 ಮಿಲಿಯನ್ ಹೆಕ್ಟೇರ್‌ಗಳಷ್ಟಿದೆ ಎಂದು ಅಂದಾಜಿಸಲಾಗಿದೆ. ಅಂದಾಜು 24% ಭಾರತದ ಭೂಭಾಗ ಅರಣ್ಯದಿಂದಾವರಿಸಿದೆ, ಈ ಪ್ರಮಾಣವನ್ನು 2020ರೊಳಗಾಗಿ 33% ಕ್ಕೇರಿಸುವ ಗುರಿ ನಮ್ಮ ದೇಶದ್ದಾಗಿದೆ. ಅರಣ್ಯ ಉಳಿಸುವುದು, ಬೆಳೆಸುವುದು ಕೇವಲ ಸರ್ಕಾರದ ಹೊಣೆಯಲ್ಲ. ಇದು ನಮ್ಮೆಲ್ಲರ ಹೊಣೆ. ಸರ್ಕಾರ ಮಾಡಲಿ, ಬಿಡಲಿ, ನಾವಂತೂ ಕಾಡು ಬೆಳೆಸುವುದರ ಬಗ್ಗೆ ಪ್ರಯತ್ನಿಸಬೇಕಿದೆ. ನಮ್ಮ ಊರು, ನಮ್ಮ ಜಮೀನಿನಲ್ಲಿ ಹೆಚ್ಚು ಹೆಚ್ಚು ಗಿಡ ನೆಡುವ ಕೆಲಸ ಶುರು ಮಾಡಬೇಕಿದೆ. ಕಾಡು ಬೆಳೆಸುವ ಬಗ್ಗೆ ಪ್ರಯತ್ನ ಮಾಡಿದ, ಹೊಸ ವಿಧಾನಗಳ ಪ್ರಯೋಗ ಮಾಡಿದ ಕೆಲವರ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಇಲ್ಲಿದೆ.

### ನಗರಗಳಲ್ಲಿ ಅರಣ್ಯ: ಶುಭೇಂದು ಶರ್ಮಾ ಅವರ ವಿನೂತನ ಪ್ರಯೋಗ

ಬೆಂಗಳೂರಿನ ಟೊಯೋಟಾ ಕಿರ್ಲೋಸ್ಕರ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ ಶುಭೇಂದು ಶರ್ಮಾ ಕಾಡು ಬೆಳೆಸುವ ಹುಚ್ಚಿಗೆ ಬಿದ್ದಿದ್ದು ಒಂದು ಆಕಸ್ಮಿಕ. ತಮ್ಮ ಕಂಪೆನಿಯ ಹಿಂಬದಿಯಲ್ಲಿದ್ದ ಸ್ವಲ್ಪ ಖಾಲಿ ಜಾಗದಲ್ಲಿ ಕಾಡು ಬೆಳೆಸುವ ಕೆಲಸಕ್ಕಾಗಿ ಜಪಾನಿನಿಂದ ಪರಿಸರ ಕಾರ್ಯಕರ್ತೆ ಅಕಿರಾ ಮಿಯವಾಕಿ ಅವರು ಬಂದಿದ್ದರು. ಅವರೊಂದಿಗೆ ಸ್ವಯಂಸೇವಕರಾಗಿ ಕೈಜೋಡಿಸಿದರು ಶುಭೇಂದು. ಥೈಲ್ಯಾಂಡಿನಿಂದ ಅಮೆಝಾನ್ ಕಾಡುಗಳವರೆಗೂ ಅನೇಕ ಪ್ರದೇಶಗಳಲ್ಲಿ ಕಾಡು ಬೆಳೆಸಿದ ಅನುಭವ ಹೊಂದಿದ್ದ ಅಕಿರಾ ಅವರು ಕಾಡು ಬೆಳೆಸಲು ತಮ್ಮದೇ ಒಂದು ವಿಧಾನ ಕಂಡುಕೊಂಡಿದ್ದರು. ಭಾರತದಲ್ಲೂ ಏಕೆ ಈ ವಿಧಾನ ಅನುಸರಿಸಬಾರದು ಎಂಬ ಯೋಚನೆ ಬಂದಿದ್ದೇ ತಡ, ಅದನ್ನು ಕಾರ್ಯರೂಪಕ್ಕಿಳಿಸಿಯೇ ಬಿಟ್ಟರು ಶುಭೇಂದು.




ಮೂಲತಃ ಉತ್ತರಾಖಂಡದವರಾದ ಇವರು ತಮ್ಮ ಮನೆಯ ಹಿಂಬದಿಯಲ್ಲಿದ್ದ ಸ್ವಲ್ಪ ಖಾಲಿ ಜಾಗದಲ್ಲಿ ಅಕಿರಾ ಅವರ ವಿಧಾನದಲ್ಲಿ ಸ್ವಲ್ಪ ಬದಲಾವಣೆ ತಂದು ಕಾಡು ಬೆಳೆಸುವ ಪ್ರಯೋಗ ಮಾಡಿದರು. ಒಂದೇ ವರ್ಷದಲ್ಲಿ ಹಸಿರು ಎದ್ದು ನಿಂತಾಗ ಶುಭೇಂದು ಅವರ ವಿಶ್ವಾಸ ನೂರ್ಮಡಿಯಾಯಿತು. ತಕ್ಷಣವೇ ತಮ್ಮ ಕಂಪೆನಿಯ ಕೆಲಸಕ್ಕೆ ರಾಜೀನಾಮೆ ನೀಡಿ, ಕಾಡು ಬೆಳೆಸುವ ಉದ್ದೇಶದಿಂದಲೇ ತಮ್ಮದೇ ಸ್ವಂತ ಕಂಪೆನಿಯನ್ನು ಪ್ರಾರಂಭಿಸಿದರು. 'ಅಫ್ಫಾರೆಸ್ಟ್' ಎನ್ನುವ ಹೆಸರಿನ ಈ ಕಂಪೆನಿ ಇಂದು ಭಾರತದ 11 ನಗರಗಳಲ್ಲಿ 33 ಕಡೆ ಅರಣ್ಯ ಬೆಳೆಸುವ ಕೆಲಸ ಮಾಡಿದೆ. ನಗರಗಳಲ್ಲಿ ಕನಿಷ್ಠ 1,000 ಚದರ ಅಡಿಯ ಖಾಲಿ ಜಾಗವಿದ್ದರೆ ಕಾಡು ಬೆಳೆಸಲು ಇವರ ಕಂಪೆನಿ ಸಹಾಯ ಮಾಡುತ್ತದೆ. ಅಲ್ಲಿನ ಮಣ್ಣಿನ ಗುಣಲಕ್ಷಣವನ್ನು ಅಧ್ಯಯನ ಮಾಡಿ, ನರ್ಸರಿಯಲ್ಲಿ ಸಸಿ ಮಾಡಿ, ನೆಟ್ಟು ಪೋಷಿಸುವ ಕೆಲಸ ಎಲ್ಲವನ್ನೂ ಇವರ ಕಂಪೆನಿಯ 6 ಜನರ ತಂಡ ಮಾಡುತ್ತದೆ. ಹತ್ತು ವರ್ಷದಲ್ಲೇ, ನೂರು ವರ್ಷ ಹಳೆಯದಾದಷ್ಟು ದಟ್ಟ ಅರಣ್ಯ ಬೆಳೆಸುವುದು ಇವರ ವಿಧಾನದ ವಿಶೇಷ. ಕಳೆದ ಮೂರು ವರ್ಷದಿಂದ ಇದುವರೆಗೂ 54,000 ಕ್ಕೂ ಅಧಿಕ ಗಿಡಗಳನ್ನು ನೆಟ್ಟು ಪೋಷಿಸುತ್ತಿದೆ ಈ ಕಂಪೆನಿ. ಇದನ್ನು ಕೇವಲ ಸೇವಾಕಾರ್ಯದಂತೆ ಮಾಡದೇ, ಒಂದು ಕಂಪೆನಿಯಂತೆ ಕೆಲಸ ಮಾಡುತ್ತಿದ್ದಾರೆ. ತಮ್ಮ ಕೆಲಸಕ್ಕೆ ಗ್ರಾಹಕರಿಂದ ಹಣ ಪಡೆಯುವ ಇವರ ಕಂಪೆನಿ ಇಂದು ಲಾಭದಲ್ಲಿ ನಡೆಯುತ್ತಿದೆ.

ಆಯಾ ಪ್ರದೇಶಗಳಲ್ಲಿ ಸಹಜವಾಗಿ ಬೆಳೆಯುವ ಕಾಡಿನಿಂದ ಬೀಜ ಸಂಗ್ರಹಿಸಿ ಅಂತಹ ಸಸಿ ಮಾಡಿ, ಅಂತಹ ಕಾಡನ್ನೇ ಬೆಳೆಸುವುದು ಇವರ ವಿಶೇಷತೆ. ಕಾಡು ಬೆಳೆಸುವ ಹೆಸರಿನಲ್ಲಿ ಆ ಪ್ರದೇಶದಲ್ಲಿ ಸಹಜವಾಗಿ ಬೆಳೆಯದ ಗಿಡಗಳನ್ನು ತಂದು ನೆಟ್ಟು ಹಸಿರು ಹೆಚ್ಚಿಸಿದಲ್ಲಿ ಅದು ಪರಿಸರಕ್ಕೆ ಪೂರಕವಲ್ಲ. ಬದಲಿಗೆ ಅಲ್ಲಿನ ಪರಿಸರವನ್ನು ಅಧ್ಯಯನ ಮಾಡಿ ಸಹಜವಾಗಿ ಅಲ್ಲಿನ ಕಾಡಿನಲ್ಲಿ ಬೆಳೆಯುವ ಮರಗಳನ್ನೇ ಬೆಳೆಸಬೇಕು. ಅದು ಅಲ್ಲಿನ ಜೀವ ವೈವಿಧ್ಯವನ್ನು ಕಾಪಾಡಲೂ ಸಹಕಾರಿ ಎನ್ನುವುದು ಅವರ ಖಚಿತ ಅಭಿಪ್ರಾಯ.

**ಕಾಡು ಬೆಳೆಸುವ ಅನೇಕ ಪ್ರಯತ್ನಗಳು ಇಂದು ಹಲವರಿಂದ ನಡೆಯುತ್ತಿರುವುದು ಒಳ್ಳೆಯ ಬೆಳವಣಿಗೆ. ಅಂತಹವರ ಸಾಲಿಗೆ ನಾವೂ ಸೇರಿಕೊಳ್ಳಬಹುದು. ಕೇವಲ ಸೆಖೆ ಎಂದು ಬಾಯಿಬಡಿದುಕೊಳ್ಳುತ್ತ ಕೂರದೇ, ಈ ಬಾರಿಯ ಮಳೆಗಾಲದಲ್ಲಿ ನಾವೂ ಕೆಲವು ಗಿಡ ನೆಟ್ಟು ಬೆಳೆಸುವ, ಹೆಚ್ಚು ಜಾಗವಿದ್ದಲ್ಲಿ ಕಾಡು ಬೆಳೆಸುವ ಪ್ರಯತ್ನಕ್ಕೆ ಕೈಹಾಕೋಣವೇ?**



### ಬಂಜರು ಭೂಮಿ ಖರೀದಿಸಿ, ಕಾಡು ಬೆಳೆಸಿದ ದಂಪತಿ

1991 ರಲ್ಲಿ ಕೊಡಗಿನಲ್ಲಿ ಹಾಳು ಬಿದ್ದಿದ್ದ 55 ಎಕರೆ ಕೃಷಿ ಭೂಮಿಯನ್ನು ಖರೀದಿಸಿ, ಅರಣ್ಯ ಬೆಳೆಸುವ ಪ್ರಯತ್ನಕ್ಕೆ ಕೈಹಾಕಿದ ಅನಿವಾಸಿ ಭಾರತೀಯ ದಂಪತಿ ಇಂದು 300 ಎಕರೆಯಷ್ಟು ಜಾಗದಲ್ಲಿ ಒಂದು ಖಾಸಗಿ ಅಭಯಾರಣ್ಯವನ್ನೇ ನಿರ್ಮಿಸಿದ್ದಾರೆ. ಡಾ. ಅನಿಲ್ ಮಲ್ಹೋತ್ರ ಹಾಗೂ ಪಮೇಲಾ ಮಲ್ಹೋತ್ರ ದಂಪತಿಗಳ ಈ ಅಭಯಾರಣ್ಯವಿಂದು ಹುಲಿ, ಆನೆ, ಕತ್ತೆಕಿರುಬ, ಕಾಡುಹಂದಿ, ಚಿರತೆ ಮತ್ತಿತರ ಪ್ರಾಣಿಗಳ ವಾಸಸ್ಥಾನವಾಗಿದೆ.

ಎಲ್ಲವನ್ನು ಸರ್ಕಾರವೇ ಮಾಡಬೇಕು ಎಂದು ನಿರೀಕ್ಷಿಸುವ ಬದಲು ಜನರು, ಸಂಘ–ಸಂಸ್ಥೆಗಳು ಸೇರಿ ವನ್ಯಜೀವಿ ಸಂರಕ್ಷಣೆಯಲ್ಲಿ ತೊಡಗಿ ತಮ್ಮ ಕೈಲಾದ ಕೊಡುಗೆ ನೀಡಬೇಕು ಎನ್ನುತ್ತಾರೆ ಅನಿವಾಸಿ ಭಾರತೀಯರಾದ ಅನಿಲ್ ಮತ್ತು ಪಮೇಲಾ ಮಲ್ಹೋತ್ರ ದಂಪತಿ.

ಕೇವಲ ಕಾಡು ಬೆಳೆಸಿದ್ದು ಮಾತ್ರವಲ್ಲ. ಕಾಡಿನ ಬಗ್ಗೆ ಅಧ್ಯಯನ ಕೂಡ ಮಾಡಿರುವ ಇವರು ಕಾಡುಪ್ರಾಣಿಗಳಿಗೆ, ಅವುಗಳ ಚಲನವಲನಗಳಿಗೆ ಯಾವುದೇ ರೀತಿ ಅಡ್ಡಿಬಾರದಂತೆ ನೋಡಿಕೊಳ್ಳುತ್ತಾರೆ. ಆನೆಗಳ ಪ್ರಾಮುಖ್ಯದ ಬಗ್ಗೆ ತಿಳಿಸುತ್ತಾ, ಇವುಗಳು ಬೀಜಗಳನ್ನು ಪುಡಿಮಾಡದೇ ಇಡಿಯಾಗಿ ನುಂಗುವುದರಿಂದ ಕಾಡು ಹರಡಲು ಹಾಗೂ ಬೆಳೆಯಲು ನೆರವಾಗುತ್ತವೆ. ಸುಮಾರು 30 ಜಾತಿಯ ಮರಗಳು ಪುನರುತ್ಪಾದನೆಗೆ ಆನೆಗಳನ್ನೇ ಅವಲಂಬಿಸಿವೆ ಎನ್ನುತ್ತಾರೆ ಪಮೇಲಾ ಮಲ್ಹೋತ್ರ.

ಹೊಸ ಪ್ರಾಣಿಗಳನ್ನು ಗುರುತಿಸಲು ಹಾಗೂ ಕಳ್ಳಸಾಗಣೆ ಮತ್ತು ಬೇಟೆಯನ್ನು ತಡೆಯಲು ಹಲವೆಡೆ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಪ್ರಾಣಿಗಳಿಗೆ ಮಾತ್ರ ಕಾಡಿನ ಅಗತ್ಯವಿದೆ ಎಂದು ಹಲವರು ಭಾವಿಸುತ್ತಾರೆ. ಆದರೆ ಕಾಡಿಗೂ ಪ್ರಾಣಿ–ಪಕ್ಷಿಗಳ ಆವಶ್ಯಕತೆಯಿದೆ. ಕಾಡು ಪ್ರಾಣಿಗಳಿಗೆ ಆಹಾರ, ವಾಸಸ್ಥಾನ ಒದಗಿಸುತ್ತದೆ, ಪ್ರಾಣಿಗಳು ಕಾಡು ಬೆಳೆಯಲು ಸಹಕರಿಸುತ್ತವೆ. ಹೀಗೆ ಕಾಡು ಹಾಗೂ ಪ್ರಾಣಿಗಳೆರಡೂ ಒಂದರ ಮೇಲೊಂದು ಅವಲಂಬಿತವಾಗಿವೆ. ಹಾಗಾಗಿ ಎರಡನ್ನೂ ಸಂರಕ್ಷಿಸಲು ನಾವು ಪ್ರಯತ್ನಿಸಬೇಕು ಎನ್ನುತ್ತಾರೆ ಅನಿಲ್ ಮಲ್ಹೋತ್ರ.

ಇದೇ ಪ್ರದೇಶದ ಸ್ವಲ್ಪ ಜಾಗದಲ್ಲಿ ಸಾವಯವ ಕೃಷಿಯನ್ನು ಸಹ ಇವರು ಮಾಡುತ್ತಿದ್ದಾರೆ. ಸಂಪೂರ್ಣ ಅಭಯಾರಣ್ಯಕ್ಕೆ ಬೇಕಾಗುವಷ್ಟು ವಿದ್ಯುತ್ತನ್ನು ಸೌರ ಹಾಗೂ ಪರ್ಯಾಯ ಮೂಲಗಳಿಂದ ಉತ್ಪಾದಿಸಲಾಗುತ್ತಿದೆ. ಭಾರಿ ಮಳೆಯ ಸಂದರ್ಭದಲ್ಲಿ 3 ಸಣ್ಣ ಗಾಳಿ ಯಂತ್ರಗಳು ವಿದ್ಯುತ್ ಒದಗಿಸುತ್ತವೆ.



### ಬಂಜರು ಭೂಮಿಯಲ್ಲಿ 1,360 ಅರಣ್ಯ ಬೆಳೆಸಿದ ಏಕಾಂಗಿವೀರ

1979ರಲ್ಲಿ ಅಸ್ಸಾಮಿನ ಜೋರಾಟ್ ಜಿಲ್ಲೆಯಲ್ಲಿ ನೂರಾರು ಹಾವುಗಳೂ ಸೇರಿದಂತೆ ಹಲವಾರು ಸರೀಸೃಪಗಳು ಪ್ರವಾಹಕ್ಕೆ ಸಿಲುಕಿ ತೇಲಿಬಂದು ಮರಗಳಿಲ್ಲದ ಮರಳಿನ ದಿಬ್ಬಗಳಂತಿದ್ದ ಪ್ರದೇಶದಲ್ಲಿ ಮರಣ ಹೊಂದಿದ ಭೀಕರ ದೃಶ್ಯಗಳಿಗೆ 16 ರ ಹರೆಯದ ಜಾಧವ್ ಮೊಲಾಯ್ ಪಯಾಂಗ್ ಸಾಕ್ಷಿಯಾಗಬೇಕಾಯಿತು. ಆ ಪ್ರಾಣಿಗಳು ಅಲ್ಲಿ ಯಾವುದೇ ಗಿಡ–ಮರಗಳ ಆಸರೆಯಿಲ್ಲದ ಕಾರಣ ಶಾಖಕ್ಕೆ ಪ್ರಾಣಬಿಟ್ಟಿದ್ದವು. ಅದನ್ನು ನೋಡಿ ದುಃಖಿತನಾದ ಆತ, ಅಲ್ಲಿ ನೀವು ಮರಗಳನ್ನು ಬೆಳೆಸಬಹುದೇ

*2ನೇ ಪುಟಕ್ಕೆ*

1ನೇ ಪುಟದಿಂದ...

## ಬಂಜರು ಭೂಮಿಯಲ್ಲಿ 1,360 ಅರಣ್ಯ ಬೆಳೆಸಿದ ಏಕಾಂಗಿವೀರ

ಎಂದು ಅರಣ್ಯ ಇಲಾಖೆಯವರನ್ನು ಕೇಳಿದ. ಆಗ ಆ ಬಾಲಕನಿಗೆ, 'ಇಲ್ಲಿ ಯಾವ ಮರವೂ ಬೆಳೆಯೋಲ್ಲ, ಬಿದಿರು ಬೆಳೆದರೂ ಬೆಳೆಯಬಹುದು. ನೀನೇ ಪ್ರಯತ್ನಿಸಿ ನೋಡು' ಎಂಬ ಉತ್ತರ ಸಿಕ್ಕಿತು. ಈ ಘಟನೆಯಿಂದ ಬಹುವಾಗಿ ಪ್ರಭಾವಿತನಾಗಿದ್ದ ಪಯಾಂಗ್ ಬ್ರಹ್ಮಪುತ್ರ ನದಿಯ ತಟದ ಆ ಮರಳ ದಿಬ್ಬದಂತಹ ಬಂಜರು ಜಾಗದಲ್ಲಿ ಗಿಡಗಳನ್ನು ಬೆಳೆಸಲು ಪ್ರಾರಂಭಿಸಿದ. ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳೆಯುವ ಮರಗಳ ಬೀಜ ಸಂಗ್ರಹಿಸಿ, ಕಾಳಜಿವಹಿಸಿ ಸಸಿ ಮಾಡಿದ. ಬೇಸಿಗೆಯಲ್ಲಿ ತಾನೇ ನೀರು ಹಾಕಿದ, ಬಿಸಿಲಿಗೆ ಒಣಗದಂತೆ ನೆರಳಿನ ವ್ಯವಸ್ಥೆ ಮಾಡಿದ. ಮನೆಯ ಮಕ್ಕಳನ್ನು ಸಲಹಿದಂತೆ ಆಸ್ಥೆ ವಹಿಸಿ ಪೋಷಿಸಿದ. ಮೂರೂವರೆ ದಶಕಗಳ ನಂತರ ಇಂದು ಆ ಪ್ರದೇಶದಲ್ಲಿ ದೊಡ್ಡ ಕಾಡು ಬೆಳೆದು ನಿಂತಿದೆ. ಇಂದು ಇದು 5 ಹುಲಿಗಳು, 3 ಖಡ್ಗಮೃಗಗಳು, ಹಲವು ಸರೀಸೃಪಗಳು ಹಾಗೂ ಅನೇಕ ಇತರ ಪ್ರಾಣಿ–ಪಕ್ಷಿಗಳನ್ನು ಹೊಂದಿರುವ, 1,360 ಎಕರೆಗಳಷ್ಟು ವಿಸ್ತೀರ್ಣದಲ್ಲಿ ಹರಡಿರುವ ದಟ್ಟ ಅರಣ್ಯವಾಗಿದೆ.

ಇದೆಲ್ಲಾ ಸಾಧ್ಯವಾಗಿದ್ದು ಜಾಧವ್ ಮೊಲಾಯ್ ಪಯಾಂಗ್ ಎಂಬ ಒಬ್ಬ ವ್ಯಕ್ತಿಯ ಇಚ್ಛಾಶಕ್ತಿಯಿಂದಾಗಿ. ಇಂದು ಈ ಅರಣ್ಯ ಪ್ರದೇಶವನ್ನು 'ಮೊಲಾಯ್' ಅರಣ್ಯವೆಂದೇ ಕರೆಯಲಾಗುತ್ತದೆ. ಪ್ರಪಂಚದ ಅತೀ ದೊಡ್ಡ ನದಿ–ದ್ವೀಪವಾಗಿರುವ ಮಜುಲಿ ತಾಲೂಕಿನ ಬಾಂಗಾಂವ್ ಗ್ರಾಮದಲ್ಲಿ ಕಾಡನ್ನು ಬೆಳೆಸುವುದು ಇವರ ಮುಂದಿನ ಗುರಿ. ಅಸ್ಸಾಮ್‌ನ 'ಮಿಶಿಂಗ್' ಎಂಬ ಬುಡಕಟ್ಟು ಜನಾಂಗಕ್ಕೆ ಸೇರಿದ ಇವರು ತನ್ನ ಪತ್ನಿ ಹಾಗೂ ಮೂರು ಮಕ್ಕಳೊಂದಿಗೆ ಕಾಡಿನಲ್ಲಿ ಪುಟ್ಟ ಗುಡಿಸಲೊಂದರಲ್ಲಿ ವಾಸವಾಗಿದ್ದಾರೆ. ಜಾನುವಾರು ಸಾಕಣೆ ಮಾಡಿರುವ ಇವರಿಗೆ ಹಾಲು ಮಾರಾಟದಿಂದ ಬರುವ ಆದಾಯವೇ ಏಕೈಕ ಜೀವನಾಧಾರ. ತಾನು ಶ್ರೀಮಂತನಲ್ಲದಿದ್ದರೂ ಪ್ರಕೃತಿಯ ಶ್ರೀಮಂತಿಕೆಗೆ ಇವರು ನೀಡಿದ ಕೊಡಿಗೆ ಅನುಕರಣೀಯ.

## ದಿಲ್ಲಿ: 1 ವರ್ಷ ಎಲ್ಲ ತಂಬಾಕು ಉತ್ಪನ್ನಕ್ಕೆ ನಿಷೇಧ

ಒಂದು ವರ್ಷ ಅವಧಿಗೆ ಎಲ್ಲ ರೀತಿಯ ತಂಬಾಕು ಉತ್ಪನ್ನಗಳನ್ನು ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ನೇತೃತ್ವದ ದಿಲ್ಲಿ ಸರ್ಕಾರ ನಿಷೇಧಿಸಿದೆ. ಜಗಿಯುವ ಗುಟ್ಕಾ, ಪಾನ್‌ಮಸಾಲ, ಖಾನಿ, ಜರ್ದಾ ಸೇರಿದಂತೆ ಎಲ್ಲ ರೀತಿಯ ತಂಬಾಕು ವಸ್ತುಗಳು, ತಂಬಾಕು ಸಂಗ್ರಹ, ವಿತರಣೆ, ತಯಾರಿಕೆ, ಮಾರಾಟ, ಪ್ಯಾಕಿಂಗ್ ನಿಷೇಧಿಸಿ, ಆಹಾರ ಸುರಕ್ಷತೆ ಇಲಾಖೆ ಅಧಿಸೂಚನೆ ಹೊರಡಿಸಿದೆ. ಒಂದು ವರ್ಷ ಅವಧಿಗೆ ಮಾತ್ರ ಈ ಆದೇಶ ಜಾರಿಯಲ್ಲಿರಲಿದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ನಗರದಲ್ಲಿ ಮೊದಲು ಗುಟ್ಕಾವನ್ನು ನಿಷೇಧಿಸಲಾಗಿತ್ತು. ಆದರೆ, ಮಾರಾಟಗಾರರು ಅಡಿಕೆ ಮತ್ತು ತಂಬಾಕು ಇರುವ ಕಚ್ಚಾ ವಸ್ತುಗಳ ಪ್ಯಾಕೆಟ್ ಅನ್ನು ಪತ್ಯೇಕವಾಗಿ ಮಾರಾಟ ಮಾಡುತ್ತಿದ್ದರು.

## ಹೆಮ್ಮೆಯ ಮಹಿಳೆಯರು

### ಪೂಜಾ ಠಾಕೂರ್

ಮದ್ದು, ಗುಂಡು ಮತ್ತು ಫಿರಂಗಿಗಳ ಜೊತೆ ಸೆಣಸಾಡುವುದು ಪುರುಷರು ಮಾತ್ರ ಎಂಬ ಮಾತು ಸುಳ್ಳಾಗಿದೆ. ಇಂದು ಯುವತಿಯರು ಕೂಡ ಭಾರತೀಯ ಸೇನೆಗೆ ಸೇರುವ ಮೂಲಕ ದೇಶ ಪ್ರೇಮ ಮೆರೆಯುತ್ತಿದ್ದಾರೆ. ಇಂಥ ಗಟ್ಟಿಗಿತ್ತಿಯರಲ್ಲಿ ಪೂಜಾ ಠಾಕೂರ್ ಕೂಡ ಒಬ್ಬರು.

ಪೂಜಾ ಠಾಕೂರ್ ರಾಜಸ್ಥಾನದವರು. ಪೂಜಾ ತಂದೆ ಸೇನೆಯಲ್ಲಿ ಉನ್ನತ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಪೂಜಾಗೆ ತಂದೆಯ ಪ್ರಭಾವದಿಂದ ಚಿಕ್ಕ ವಯಸ್ಸಿನಿಂದಲೂ ಯುದ್ಧ ಭೂಮಿಯಲ್ಲಿ ಹೋರಾಡಬೇಕು ಎಂಬ ಕನಸು! ಆದರೆ ತಾಯಿಗೆ ಮಾತ್ರ ಮಗಳು ವೈದ್ಯೆಯಾಗಬೇಕು ಎಂಬ ಬಯಕೆ!

ಅಂತಿಮವಾಗಿ ಪೂಜಾ ಇಂಗ್ಲಿಷ್ ಸಾಹಿತ್ಯದಲ್ಲಿ ಪದವಿ ಪಡೆದು, ಭಾರತೀಯ ವಾಯುಪಡೆಯಲ್ಲಿ ಕೆಲಸಕ್ಕೆ ಸೇರಿ ತಮ್ಮ ಕನಸನ್ನು ನನಸಾಗಿಸಿಕೊಂಡರು. ಭಾರತೀಯ ವಾಯುಪಡೆಯಲ್ಲಿ ಮಹಿಳೆಯೊಬ್ಬರು ವಿಂಗ್ ಕಮಾಂಡರ್ ಆಗಿದ್ದು ಇದೇ ಮೊದಲು. ಹಾಗಾಗಿ ಅವರು ದೇಶದಾದ್ಯಂತ ದೊಡ್ಡ ಸುದ್ದಿಯಾಗಿದ್ದರು.

2015ರ ಜನವರಿ ತಿಂಗಳಲ್ಲೂ ಪೂಜಾ ಮತ್ತೊಮ್ಮೆ ವಿಶ್ವದಾದ್ಯಂತ ಸುದ್ದಿಯಾದರು. ಗಣ ರಾಜ್ಯೋತ್ಸವಕ್ಕೆ ಅತಿಥಿಯಾಗಿ ಬಂದಿದ್ದ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಅವರ ಆಂತರಿಕ ಭದ್ರತೆಯ ಉಸ್ತುವಾರಿ ನಿಭಾಯಿಸಿ ಗಮನ ಸೆಳೆದರು. ವಿಶ್ವದ ದೊಡ್ಡಣ್ಣನಿಗೆ ಮಹಿಳೆಯೊಬ್ಬರು ಭದ್ರತೆ ನೀಡಿದ್ದು ಇದೇ ಮೊದಲು ಎಂದು ಅಮೆರಿಕ ಪತ್ರಿಕೆಗಳು ಬರೆದಿದ್ದು ವಿಶೇಷ. ಅದು ಭಾರತಕ್ಕೆ ಸಂದ ಗೌರವವೂ ಹೌದು. ಕಠಿಣ ಪರಿಶ್ರಮ, ಇಚ್ಛಾಶಕ್ತಿ ಮತ್ತು ದೂರದೃಷ್ಟಿಯ ಫಲದಿಂದ ಸೇನೆಯಲ್ಲಿ ಉನ್ನತ ಸ್ಥಾನಕ್ಕೆ ಏರಲು ಸಾಧ್ಯವಾಯಿತು ಎನ್ನುತ್ತಾರೆ ಪೂಜಾ. 'ಸೇನೆಯಲ್ಲಿ ಮಹಿಳೆಯರಿಗೆ ಸಾಕಷ್ಟು ಅವಕಾಶಗಳಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ನೀವು ಪೊಲೀಸ್ ಕಾನ್‌ಸ್ಟೆಬಲ್ ಕೆಲಸ ನಿಭಾಯಿಸುವಷ್ಟೇ ಸುಲಭದ ಕೆಲಸ ಇದು' ಎಂದು ಪೂಜಾ ಯುವತಿಯರಿಗೆ ಕಿವಿ ಮಾತು ಹೇಳುತ್ತಾರೆ.

### ಹರ್ಷಿಣಿ ಕಾನ್ಹೆಕರ್

ಬದಲಾವಣೆ ಈ ಜಗದ ನಿಯಮ. ತಮ್ಮ ಚಿಂತನೆಗಳನ್ನು ಬದಲಿಸಿಕೊಳ್ಳುತ್ತಿದ್ದಾರೆ ನಾಲ್ಕು ಗೋಡೆಯ ಮಧ್ಯೆ ಸೌಟು ಹಿಡಿದು ಕಾಲ ಕಳೆಯುತ್ತಿದ್ದ ಮಹಿಳೆಯರು, ಒಂದು ಕಾಲ ಘಟದಲ್ಲಿ ಶಿಕ್ಷಣ ಪಡೆಯುವಂತಾದರು! ಮುಂದೆ ಬದಲಾವಣೆ ಮತ್ತು ಸಮಾನತೆಗೆ ಬೆಸೆದುಕೊಂಡರು. ಇಂದು ಎಲ್ಲ ಕ್ಷೇತ್ರಗಳಲ್ಲೂ ಸಕ್ರಿಯರಾಗಿ ದುಡಿಯುತ್ತಿದ್ದಾರೆ. ಯುದ್ಧ ಹಾಗೂ ಟ್ರಕ್ ಚಾಲನೆಯಂತಹ ಪುರುಷ ಪ್ರಧಾನ ಉದ್ಯೋಗಗಳಲ್ಲೂ ತಮ್ಮ ಛಾಪು ತೋರಿಸಿ ಸೈ ಎನಿಸಿಕೊಂಡಿದ್ದಾರೆ. ಇಂತಹ ಸಾಧಕಿಯರಲ್ಲಿ ಹರ್ಷಿಣಿ ಕಾನ್ಹೆಕರ್ ಕೂಡ ಒಬ್ಬರು.

ಹರ್ಷಿಣಿ ಮೂಲತಃ ಮಹಾರಾಷ್ಟ್ರದವರು. ಅಗ್ನಿಶಾಮಕ ದಳದಲ್ಲಿ ಕೆಲಸಕ್ಕೆ ಸೇರಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆ ಅವರದ್ದು! ಉದ್ಯೋಗಕ್ಕೆ ಸುಲಭದ ಹಲವು ದಾರಿಗಳಿದ್ದರೂ ಯುವತಿಯರಿಗೆ ಮಾದರಿಯಾಗುವಂತಹ, ಅವರಲ್ಲಿ ಆತ್ಮವಿಶ್ವಾಸ ತುಂಬುವಂತಹ ಕೆಲಸಕ್ಕೆ ಸೇರಬೇಕೆಂಬುದು ಹರ್ಷಿಣಿ ಕನಸಾಗಿತ್ತು. ಆಗ ಆಯ್ದುಕೊಂಡಿದ್ದು ಅಗ್ನಿಶಾಮಕ ದಳವನ್ನು! ಹರ್ಷಿಣಿ 2002ರಲ್ಲಿ ನ್ಯಾಷನಲ್ ಫೈರ್ ಸರ್ವೀಸ್ ಕಾಲೇಜ್‌ಗೆ ಪ್ರವೇಶ ಪಡೆದರು. ಅಲ್ಲಿಯವರೆಗೂ ಆ ಕ್ಯಾಂಪಸ್‌ನಲ್ಲಿ ಒಬ್ಬ ವಿದ್ಯಾರ್ಥಿನಿಯೂ ಸುಳಿದಿರಲಿಲ್ಲವಂತೆ! ಪ್ರವೇಶಾತಿಗಾಗಿ ಸಾಕಷ್ಟು ಸಂಕಷ್ಟಗಳನ್ನು ಎದುರಿಸಬೇಕಾಯಿತು.

ನನಗೆ ಪ್ರತ್ಯೇಕವಾಗಿ ದೈಹಿಕ ಪರೀಕ್ಷೆ ಮತ್ತು ಸಂದರ್ಶನ ನಡೆಸಿದರು. ಪುರುಷರು ಮಾಡುವಂತಹ ಕಷ್ಟದ ದೈಹಿಕ ಕಸರತ್ತುಗಳನ್ನು ಪರೀಕ್ಷೆ ಮಾಡಿ ತೋರಿಸಿದೆ. ಹಿರಿಯ ಅಧಿಕಾರಿಗಳಿಂದ ಅನುಕಂಪ ಅಪೇಕ್ಷಿಸದೆ ಕಟ್ಟಡ ಹತ್ತುವುದು, ಅರಣ್ಯ ಪ್ರದೇಶದಲ್ಲಿ ಬೆಂಕಿ ನಂದಿಸುವುದು, ತುರ್ತು ಪರಿಸ್ಥಿತಿ ನಿಭಾಯಿಸುವುದು, ಟ್ರಕ್ ಚಾಲನೆ ಮಾಡುವಂತಹ ಕಠಿಣ ಪರಿಶ್ರಮ ಬೇಡುವ ಕೆಲಸಗಳಲ್ಲಿ ಯಶಸ್ವಿಯಾಗಿ ತರಬೇತಿ ಪಡೆದೆ. ನಮ್ಮ ಬ್ಯಾಚ್‌ನಲ್ಲಿ ಮೊದಲ ರ್‍ಯಾಂಕ್ ಪಡೆದು ಯಶಸ್ವಿಯಾಗಿ ಕೋರ್ಸ್ ಪೂರೈಸಿದೆ ಎನ್ನುತ್ತಾರೆ ಹರ್ಷಿಣಿ.

## ಬರ ಎದುರಿಸಿದ ದೇಸಿ ಬಂಗಾರ!

ನೆಲದ ಮಾತು

ರಾಯಚೂರು, ಬಳ್ಳಾರಿ, ಹಾವೇರಿ ಪ್ರದೇಶದಲ್ಲಿ ಈಗ ಗರ ಬಡಿದಂಥ ಸ್ಥಿತಿ. ಗುಲಾಬಿ ಕಾಯಿಕೊರಕ ಹಾಗೂ ರಸಹೀರುವ ಕೀಟಬಾಧೆಗೆ ಸಿಲುಕಿ, ಬಿಟಿ ಹತ್ತಿ ಸಂಪೂರ್ಣ ನಾಶವಾಗಿದೆ. ಹತ್ತಿ ಗಿಡಗಳು ಪೊರಕೆ ಕಡ್ಡಿಗಳಂತೆ ಪೇಲವವಾಗಿ ನಿಂತಿವೆ. ಆ ದಿಕ್ಕಿಗೆ ವಿರುದ್ಧವಾಗಿ ನಡೆದ ಕಾಟ್ರಹಳ್ಳಿ ಕಲ್ಲಪ್ಪ, ದೇಸಿ ಹತ್ತಿ ಯಶೋಗಾಥೆಯ ಹೀರೊ! ಬರೀ ಬಿಟಿ ಹತ್ತಿ, ಮೆಕ್ಕೆಜೋಳವನ್ನು ನೆಚ್ಚಿಕೊಂಡು ವಾಣಿಜ್ಯ ಕೃಷಿಯ ಬೆನ್ನು ಹತ್ತಿದವರೆಲ್ಲ ಕೈಸುಟ್ಟುಕೊಂಡು ಪರಿತಪಿಸುತ್ತಿರುವಾಗ, ಕಲ್ಲಪ್ಪ ದೇಸಿ ತಳಿಯ ಫಲ ಸವಿಯುತ್ತಿದ್ದಾರೆ. ಕೊಳವೆ ಬಾವಿ ಕೊರೆಸಿ, ರಾಸಾಯನಿಕ ನಂಬಿ, ಹೈಬ್ರಿಡ್ ಬೆಳೆ ಬೆಳೆಯುವುದು ಸಾಧನೆಯೇನಲ್ಲ. ಆದರೆ ಮಳೆಯಾಶ್ರಯದಲ್ಲಿ ಬಹುಬೆಳೆ ಪದ್ಧತಿ ಅಳವಡಿಸಿಕೊಂಡು ಕಲ್ಲಪ್ಪ ಪಡೆದ ಯಶಸ್ಸು ರೈತರಿಗೆ ಮಾದರಿಯಾಗಬಲ್ಲದು. ಬರಕ್ಕೇ ಸವಾಲು!

ಬಳ್ಳಾರಿ ಜಿಲ್ಲೆ ಹಡಗಲಿ ತಾಲ್ಲೂಕಿನ ಉತ್ತಂಗಿ ಗ್ರಾಮದ ಈ ರೈತ, ಕೇವಲ ಮಳೆಯನ್ನು ನಂಬಿ ತೆಗೆಯುತ್ತಿರುವ ಬೆಳೆಗಳನ್ನು ಗಮನಿಸಿ: ನವಣೆ, ದೇಸಿ ಹತ್ತಿ, ಕಡಲೆ, ದನಿಯಾ (ಕೊತ್ತಂಬರಿ), ಹೆಸರು, ತೊಗರಿ, ತರಕಾರಿಗಳಾದ ಪುಂಡಿ, ಹೀರೇಕಾಯಿ, ಹುಳಿಚಿಕ್ಕಿ, ಚವಳಿ, ತುಪ್ಪದ ಹೀರೆ ಇತ್ಯಾದಿ. ಸುತ್ತಲಿನ ರೈತರೆಲ್ಲ ಬಿಟಿಹತ್ತಿ ಬೆಳೆದು ಸೋತು ನಿಟ್ಟುಸಿರು ಬಿಡುತ್ತಿದ್ದರೆ, ಕಲ್ಲಪ್ಪ ಅವರ ಮೊಗದಲ್ಲಿ ಬಹುಬೆಳೆ ಯಶಸ್ಸಿನ ನಗು ಕಾಣುತ್ತದೆ.

ಒಟ್ಟು 16 ಎಕರೆಯಲ್ಲಿ ತಲಾ ಎಂಟು ಎಕರೆ ಕಪ್ಪು ಹಾಗೂ ಕೆಂಪು ಜಮೀನು ಇವರದು. ಕಪ್ಪುಮಣ್ಣಿನಲ್ಲಿ ದನಿಯಾ, ದೇಸಿ ಹತ್ತಿ, ಕಡಲೆ ಬೆಳೆ ಸಂಯೋಜಿಸಿದ್ದಾರೆ. ಅವರ ಕೃಷಿ ವಿಧಾನ ಸರಳ. ಆಗಸ್ಟ್ ಮಧ್ಯಭಾಗದಲ್ಲಿ ದನಿಯಾವನ್ನು ಮೂರು ಸಾಲುಗಳಲ್ಲಿ ಬಿತ್ತನೆ ಮಾಡುತ್ತಾರೆ. ಬಳಿಕ ಒಂದು ಸಾಲು ಖಾಲಿ ಬಿಟ್ಟು, ಮತ್ತೆ ದನಿಯಾ ಬಿತ್ತುತ್ತಾರೆ. ಅಕ್ಟೋಬರ್ ಮೊದಲ ವಾರದ ಹೊತ್ತಿಗೆ ಖಾಲಿ ಸಾಲಿನಲ್ಲಿ ಹತ್ತಿ ಬಿತ್ತುತ್ತಾರೆ. ಅ ಸಮಯದಲ್ಲಿ ದನಿಯಾ ಬೀಜ ಬಲಿಯುವ ಹಂತದಲ್ಲಿ ಇರುತ್ತದೆ. ನವೆಂಬರ್ ತಿಂಗಳಲ್ಲಿ ಅದನ್ನು ಕಟಾವು ಮಾಡಿ, ಆ ಜಾಗದಲ್ಲಿ ಹಿಂಗಾರು ಬೆಳೆಯಾಗಿ ಕಡಲೆ ಬಿತ್ತುತ್ತಾರೆ. ಹಿಂಗಾರು ಹಂಗಾಮಿನ ಬೆಳೆಯಾಗಿ ಕಡಲೆ ಹಾಗೂ ಹತ್ತಿ ಉಳಿಯುತ್ತದೆ.

'ನಮ್ದು ಖರ್ಚಿಲ್ಲದ ಬೇಸಾಯ' ಎನ್ನುವ ಕಲ್ಲಪ್ಪ, ಪದೇ ಪದೇ ಗೊಬ್ಬರ ಸುರಿಯುವ ಗೋಜನ್ನು ಅಂಟಿಸಿಕೊಂಡಿಲ್ಲ. ಎಕರೆಗೆ ಒಂದರಂತೆ ಮೂರು ಟ್ರ್ಯಾಕ್ಟರ್ ಗೊಬ್ಬರವನ್ನು ಮೊದಲ ಮೂರು ಎಕರೆಗೆ ಹಾಕುತ್ತಾರೆ. ಮುಂದಿನ ವರ್ಷ ಮತ್ತೆ ಬೇರೆ ಮೂರು ಎಕರೆಗೆ ಅಷ್ಟೇ ಗೊಬ್ಬರವನ್ನು ಸುರಿಯುತ್ತಾರೆ. ಉಳಿದಂತೆ ಸಸ್ಯ ಬೆಳವಣಿಗೆ ಹಂತದಲ್ಲಿದ್ದಾಗ, ಎಕರೆಗೆ ಒಂದು ಕ್ವಿಂಟಲ್ ಘನ ಜೀವಾಮೃತ ಕೊಡುತ್ತಾರೆ.

ಅಷ್ಟು ಬಿಟ್ಟರೆ ಮತ್ತೇನೂ ಒಳಸುರಿಗಳಿಲ್ಲ. ಬೆಳೆಗೆ ಕೀಟಗಳ ಕಾಟವಿಲ್ಲ; ರೋಗಗಳ ಬಾಧೆಯಿಲ್ಲ. ಎಂಟು ಎಕರೆ ಕಪ್ಪು ಮಣ್ಣಿನಲ್ಲಿ ಪಡೆದ ಇಳುವರಿ ಲೆಕ್ಕವನ್ನು ಅವರು ಕೊಡುವುದು ಹೀಗೆ: ಆರು ಕ್ವಿಂಟಲ್ ದನಿಯಾ, ಐದು ಕ್ವಿಂಟಲ್ ಕಡಲೆ, 16ರಿಂದ 18 ಕ್ವಿಂಟಲ್ ದೇಸಿ ಹತ್ತಿ, ಹೆಚ್ಚೂಕಡಿಮೆ ಒಂದೂಮುಕ್ಕಾಲು ಲಕ್ಷ ಆದಾಯ; ಎಕರೆಗೆ ಬರೋಬ್ಬರಿ 22 ಸಾವಿರ ಗಳಿಕೆ! ಸರ್ಕಾರದ ಸಬ್ಸಿಡಿಯ ಹಂಗಿಲ್ಲದೇ, ಮಳೆರಾಯನ ಮೇಲೆ ಮುನಿಸು ತೋರದೇ ದೇಸಿ ಬಂಗಾರ ನಂಬಿದ ಕಲ್ಲಪ್ಪನ ಮೊಗದಲ್ಲಿ ಸಂತಸ ಮೂಡದೇ ಇನ್ನೇನು?

ಕಲ್ಲಪ್ಪ ಅವರ ಬೆಳೆ ಸಂಯೋಜನೆಯಲ್ಲಿ ಅಡಗಿರುವ ಜಾಣತನ ಏನೆಂದರೆ, ಮಣ್ಣಿನ ವಿವಿಧ ಪದರುಗಳಲ್ಲಿನ ಪೋಷಕಾಂಶ ಹಾಗೂ ತೇವಾಂಶದ ಸಮರ್ಥ ಬಳಕೆ. ಮಣ್ಣಿನ ಮೇಲ್ಪದರಿನಲ್ಲಿರುವ ಪೋಷಕಾಂಶ ತೇವಾಂಶವನ್ನು ಕೊತ್ತಂಬರಿ ಹಾಗೂ ಕಡಲೆ ಬೆಳೆಗಳು ಬಳಸಿಕೊಂಡರೆ, ಅದಕ್ಕಿಂತ ಕೆಳಗಿನ ಪದರದಲ್ಲಿ ಲಭ್ಯವಿರುವ ಶಕ್ತಿಯನ್ನು ಹತ್ತಿ ಗಿಡಗಳು ಬಳಸಿಕೊಳ್ಳುತ್ತವೆ. ಒಂದಕ್ಕೊಂದು ಬೆಳೆ ಸ್ಪರ್ಧೆಯೊಡ್ಡಿಕೊಳ್ಳದೇ ಬೆಳೆಯುತ್ತವೆ. ಕಡಲೆಯು ಸಾರಜನಕ ಸ್ಥಿರೀಕರಣ (ನೈಟ್ರೋಜನ್ ಫಿಕ್ಸಿಂಗ್) ಮಾಡುವುದರಿಂದ ಹತ್ತಿ ಚೆನ್ನಾಗಿ ಬೆಳೆಯಲು ನೆರವಾಗುತ್ತದೆ. ಮುಂದಿನ ದಿನಗಳಲ್ಲಿ 'ಸಹಜ ಸಮೃದ್ಧ' ಸಾವಯವ ಕೃಷಿಕರ ಬಳಗದ ಜತೆ ಸೇರಿ ದೇಸಿ ಬೀಜ ಸಂರಕ್ಷಣೆಯನ್ನೂ ಕೈಗೊಂಡರು. ಅದರ ಹಿನ್ನೆಲೆಯಲ್ಲಿ ಅವರು ಜಯಧರ, ಪಂಢರಾಪುರ ಮೊದಲಾದ ದೇಸಿ ಹತ್ತಿ ಬೇಸಾಯ ಶುರು ಮಾಡಿದರು. ಕಲ್ಲಪ್ಪ ಅವರ ಕೃಷಿಗೆ ಮಡದಿ ಸುಮಂಗಲಾ ಕೈಜೋಡಿಸುತ್ತಾರೆ. ಮನೆಯಲ್ಲೇ ಬೇಳೆ, ಹಿಟ್ಟು ಮೌಲ್ಯವರ್ಧನೆ ಮಾಡುವ ಕೆಲಸ ಇವರದು. ಅಪರೂಪದ ಕಪ್ಪು ನವಣೆ ಸಂಗ್ರಹ ಇವರಲ್ಲಿದೆ.

ಸಾವಯವ ಮೇಳಗಳಲ್ಲಿ ಅವರು ತಮ್ಮ ಉತ್ಪನ್ನ ಮಾರುತ್ತಾರೆ. ಸಿರಿಧಾನ್ಯಗಳನ್ನು ಬೆಂಗಳೂರಿನ 'ಸಹಜ ಆರ್ಗಾನಿಕ್ಸ್'ಗೆ ಪೂರೈಸುತ್ತಾರೆ. ಇವರು ಬೆಳೆಯುವ ದೇಸಿ ಹತ್ತಿಯನ್ನು ಖರೀದಿಸುವ ಚೆನ್ನೈನ 'ತುಲಾ' ದೇಸಿ ಹತ್ತಿ ಮಾರುಕಟ್ಟೆ ಕಂಪೆನಿ, ಅದನ್ನು ಬಟ್ಟೆಯಾಗಿಸುತ್ತಿದೆ.

'ನಮ್ಮ ನೆಲಕ್ಕೆ ಈಗ ಬರುವ ಮಳೆ ಸಾಕು. ಆದರೆ ನಮ್ಮ ಜವಾರಿ ಬೆಳೆ ಮರೆತಿದ್ದಕ್ಕೆ ಇಷ್ಟೆಲ್ಲ ತೊಂದರೆ ಆಗಿದೆ. ನಾವಂತೂ ಕೊಳವೆ ಬಾವಿ ಇಲ್ಲದೆಯೇ ಕಡಿಮೆ ಖರ್ಚಿನಲ್ಲಿ ಬೆಳೆ ತೆಗೆಯುತ್ತಿದ್ದೇವೆ. ನಮಗೆ ಕೊಟ್ಟಿದ್ದನ್ನು ಭೂಮಿತಾಯಿ ಬೇರೆಯವರಿಗೆ ಯಾಕೆ ಕೊಡುವುದಿಲ್ಲ ಹೇಳಿ?' ಎನ್ನುವ ಕಲ್ಲಪ್ಪನ ಮಾತು, ರೈತರಿಗೆ ಕೇಳಿಸೀತೆ? ಕಲ್ಲಪ್ಪ ಅವರ ಸಂಪರ್ಕ ಸಂಖ್ಯೆ: 9739191437.

ಸಂಪಾದಕೀಯ ಸಹಕಾರ: ಶ್ರೀಹರ್ಷ ಪೆರ್ಲ, ಶ್ರೀವತ್ಸ ಸಿ.ಎಂ., ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಪ್ರತಾಪ ಕೊಡಂಚ, ಶಶಾಂಕ್ ಹತ್ವಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್




## 'ಫೇಸ್‌ಬುಕ್'ನ್ನೇ ಮಣಿಸಿದ ಕೇರಳದ ವಿದ್ಯಾರ್ಥಿ



ಅಂತರ್ಜಾಲ ಸಾಮಾಜಿಕ ಮಾಧ್ಯಮ ಕ್ರಾಂತಿಯಲ್ಲಿ ಮಾರ್ಕ್ ಜುಕರ್‌ಬರ್ಗ್ ದೊಡ್ಡ ಹೆಸರು. ಫೇಸ್‌ಬುಕ್ ಮೂಲಕ ಅವರು ಕೋಟ್ಯಂತರ ಡಾಲರ್ ಸಂಪಾದಿಸಿದ್ದಾರೆ. ಆದರೆ ಈ ಅಂತರ್ಜಾಲ ಮಾಂತ್ರಿಕ ಉದ್ಯಮಿಯನ್ನು ಕೇರಳದ ಕೊಚ್ಚಿಯ ವಿದ್ಯಾರ್ಥಿ ಅಮಲ್ ಆಗಸ್ಟಿನ್ ಮಣಿಸಿದ್ದಾರೆ. ಜುಕರ್‌ಬರ್ಗ್ 700 ಡಾಲರ್‌ಗಳನ್ನು ಅಮುಲ್‌ಗೆ ಪಾವತಿ ಮಾಡುವ ಮೂಲಕ ಆರ್ಗ್' (maxchanzuckerberg.org) ಡೊಮೈನ್ ಹೆಸರನ್ನು ತನ್ನದಾಗಿಸಿಕೊಂಡಿದ್ದಾರೆ.

ಅಮಲ್‌ಗೆ ವಿವಿಧ ಹೆಸರುಗಳಲ್ಲಿ ಡೊಮೈನ್ ನೇಮ್ ನೋಂದಣಿ ಮಾಡುವ ಹವ್ಯಾಸವಿತ್ತು. ಜುಕರ್‌ಬರ್ಗ್ ಪುತ್ರಿ ಮ್ಯಾಕ್ಸೈಮ್ ಚಾನ್ ಜುಕರ್‌ಬರ್ಗ್ ಅವರ ಹೆಸರು ಕಿರಿದಾಗಿ ಬರುವಂತೆ ಅಮಲ್ ಈ ಡೊಮೈನ್ ನೇಮ್ ನೋಂದಣಿ ಮಾಡಿದ್ದರು. ಒಂದು ದಿನ ಈ ಡೊಮೈನ್ ನೇಮ್ ಮಾರುತ್ತೀರಾ? ಬೆಲೆ ಎಷ್ಟು ಎಂಬ ಪ್ರಶ್ನೆ ಕೇಳಿದ ಮಿಂಚಂಚೆ ಬಂತು. 'ಹೂಂ. 700 ಡಾಲರ್' ಎಂಬ ಉತ್ತರವನ್ನು ಅಮಲ್ ಕೊಟ್ಟರು. ವ್ಯವಹಾರ ಮುಂದುವರಿದು ಹಣಪಾವತಿಯೂ ಆಯಿತು. ವ್ಯವಹಾರ ಕುದುರಿಸಿದ ಪತ್ರಗಳು ಬಂದಾಗ ಈ ವ್ಯವಹಾರ ನಡೆಸಿದ್ದು ಫೇಸ್‌ಬುಕ್ ಎಂಬುದು ಅಮಲ್‌ಗೆ ಗೊತ್ತಾಯಿತು. ಫೇಸ್‌ಬುಕ್ ತನ್ನ ಬಳಿಗೇ ಬರುವಂತೆ ಮಾಡಿದ ಹೆಮ್ಮೆಗೆ ಈ ವಿದ್ಯಾರ್ಥಿ ಪಾತ್ರರಾಗಿದ್ದಾರೆ.

**ಭಾರತದ ಮೂರು ಪ್ರಮುಖ ನೈಸರ್ಗಿಕ ವಿಶ್ವ ಪರಂಪರೆ ತಾಣಗಳು ಗಣಿಗಾರಿಕೆಯಂತಹ ಕೈಗಾರಿಕಾ ಚಟುವಟಿಕೆಗಳಿಂದ ಅಪಾಯ ಎದುರಿಸುತ್ತಿವೆ ಎಂದು ವಿಶ್ವ ವನ್ಯಜೀವಿ ನಿಧಿ ತಿಳಿಸಿದೆ. ಯುನೆಸ್ಕೊ ವಿಶ್ವಪರಂಪರೆ ತಾಣ ಪಟ್ಟಿಯಲ್ಲಿರುವ ಮೂರನೇ ಎರಡಷ್ಟು ತಾಣಗಳು ನೀರಿನ ಪ್ರಮುಖ ಮೂಲಗಳಾಗಿವೆ. ಅರ್ಧದಷ್ಟು ತಾಣಗಳು ಪ್ರವಾಹ, ಭೂಕುಸಿತದಂತಹ ನೈಸರ್ಗಿಕ ಪ್ರಕೋಪಗಳನ್ನು ತಡೆಯಲು ನೆರವಾಗುತ್ತವೆ. ಆದರೆ ಗಣಿಗಾರಿಕೆ, ಅಕ್ರಮ ನಾಟಾ ಸಾಗಾಟ, ತೈಲ ಮತ್ತು ಅನಿಲ ಶೋಧಗಳಂತಹ ಚಟುವಟಿಕೆಗಳು 229 ನೈಸರ್ಗಿಕ ವಿಶ್ವಪರಂಪರೆ ತಾಣಗಳ ಪೈಕಿ 114 ತಾಣಗಳನ್ನು ಅಪಾಯಕ್ಕೆ ಒಡ್ಡಿವೆ. ಹುಲಿಗಳ ಆವಾಸ ಸ್ಥಾನವಾಗಿರುವ ಸುಂದರ್‌ಬನ್, ಜಗತ್ತಿನ ಅತ್ಯುತ್ಕೃಷ್ಟ ಜೀವ ವೈವಿಧ್ಯ ತಾಣವಾಗಿರುವ ಪಶ್ಚಿಮ ಘಟ್ಟಗಳು ಮತ್ತು ಒಂದು ಕೊಂಬಿನ ಖಡ್ಗಮೃಗಗಳಿಗೆ ಪ್ರಸಿದ್ಧವಾಗಿರುವ ಅಸ್ಸಾಂನ ಮಾನಸ್ ವನ್ಯಜೀವಿ ಧಾಮ – ಅಪಾಯ ಎದುರಿಸುತ್ತಿರುವ ಭಾರತದ ವಿಶ್ವ ಪರಂಪರೆ ತಾಣಗಳು ಎಂದು ಅದು ತಿಳಿಸಿದೆ. ಕರ್ನಾಟಕ, ತಮಿಳುನಾಡು, ಕೇರಳ, ಗೋವಾ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ವ್ಯಾಪಿಸಿರುವ ಪಶ್ಚಿಮ ಘಟ್ಟಗಳ ಸೂಕ್ಷ್ಮ ಪರಿಸರಕ್ಕೆ ಗಣಿಗಾರಿಕೆ, ತೈಲ ಮತ್ತು ಅನಿಲ ಶೋಧದಿಂದ ಅಪಾಯ ಎದುರಾಗಿದೆ. ಅಣೆಕಟ್ಟು ಮತ್ತು ಸುಸ್ಥಿರವಲ್ಲದ ನೀರು ಬಳಕೆಯಿಂದ ಮಾನಸ್ ವನ್ಯಧಾಮ ಅಪಾಯ ಎದುರಿಸುತ್ತಿದೆ ಹಾಗೂ ಪ. ಬಂಗಾಳ ಮತ್ತು ನೆರೆಯ ಬಾಂಗ್ಲಾದೇಶದಲ್ಲಿ ವ್ಯಾಪಿಸಿರುವ ಸುಂದರ್‌ಬನ್, ಅಣೆಕಟ್ಟುಗಳು, ಸುಸ್ಥಿರವಲ್ಲದ ನೀರು ಬಳಕೆ, ಮರ ಕಡಿಯುವಿಕೆ, ವಿಪರೀತ ಮೀನುಗಾರಿಕೆ, ಜಲಸಾಗಣೆಯಂತಹ ಚಟುವಟಿಕೆಗಳಿಂದ ಅಪಾಯಕ್ಕೆ ಒಳಗಾಗಿದೆ ಎಂದು ಸಮೀಕ್ಷೆ ತಿಳಿಸಿದೆ. ಒಂದು ಕೋಟಿಗೂ ಹೆಚ್ಚು ಜನ ಆಹಾರ, ನೀರು, ಆಶ್ರಯ ಮತ್ತು ಔಷಧಗಳಿಗಾಗಿ ವಿಶ್ವ ಪರಂಪರೆ ತಾಣಗಳನ್ನು ನೇರವಾಗಿ ಅವಲಂಬಿಸಿದ್ದಾರೆ.**

ಗಡಿಯಲ್ಲಿ ಉಗ್ರರ ಒಳನುಸುಳುವಿಕೆಗೆ ನಿರಂತರ ಪ್ರಚೋದನೆ ನೀಡುವುದರ ಜತೆ ಸದಾ ಕದನ ವಿರಾಮ ಉಲ್ಲಂಘಿಸುವ ಪಾಕಿಸ್ತಾನದಿಂದ ಎದುರಾಗಬಹುದಾದ ಸಂಭಾವ್ಯ ದಾಳಿ ಎದುರಿಸುವ ನಿಟ್ಟಿನಲ್ಲಿ ಸೇನೆ ಮಹತ್ವದ ಕ್ರಮ ಕೈಗೊಂಡಿದೆ. ರಾಜಸ್ಥಾನದ ಥಾರ್ ಮರುಭೂಮಿಯಲ್ಲಿ 'ಶತ್ರುಜೀತ್' ಎಂಬ ಹೆಸರಿನಲ್ಲಿ ಬಿರುಸಿನ ಸಮರಾಭ್ಯಾಸ ಆರಂಭಿಸಿದೆ ಎಂದು ಉನ್ನತ ರಕ್ಷಣಾ ಮೂಲಗಳು ತಿಳಿಸಿವೆ. ಪರಮಾಣು, ಜೈವಿಕ ಮತ್ತು ರಾಸಾಯನಿಕ ಶಸ್ತ್ರಾಸ್ತ್ರಗಳ ಬಳಕೆಯಾದರೂ ಅದನ್ನೆದುರಿಸಿ ಹೋರಾಡಲು ಅಣಿಯಾಗುವ ರೀತಿಯಲ್ಲಿ 'ಶತ್ರುಜೀತ್' ಸಮರಾಭ್ಯಾಸ ನಡೆಯುತ್ತಿದೆ. ಸೇನೆಯ ಶಸ್ತ್ರಸಜ್ಜಿತ ಫಿರಂಗಿ ಮತ್ತು ಪದಾತಿ ದಳ ಇದರಲ್ಲಿ ಪಾಲ್ಗೊಳ್ಳುತ್ತಿದೆ. ನೈರುತ್ಯ ಕಮಾಂಡ್ ಅಧೀನದಲ್ಲಿ ಮಥುರಾ ಮೂಲದ 'ಒನ್ ಕಾರ್ಪ್' ಪದಾತಿ ದಳ ಸಮರಾಭ್ಯಾಸವನ್ನು ಮುನ್ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

**ಪಾಕಿಸ್ತಾನದ ಶಾಲೆಗಳಲ್ಲಿ ಮುಸ್ಲಿಮರನ್ನು ಹೊರತುಪಡಿಸಿ ಉಳಿದವರನ್ನು ನಂಬದಂತೆ, ಜಿಹಾದಿ ಸಂಘಟನೆಗಳಿಗೆ ಹಣ ಸಂಗ್ರಹಿಸಿ**



**ನೀಡುವಂತೆ ಪಾಠ ಮಾಡಲಾಗುತ್ತಿದೆ ಎಂಬ ವಿಚಾರ ಅಮೆರಿಕ ಆಯೋಗವೊಂದು ಬಿಡುಗಡೆ ಮಾಡಿರುವ ವರದಿಯಿಂದ ಬಹಿರಂಗವಾಗಿದೆ.**



ಕೃಷಿ ಉತ್ಪಾದನೆ ಹೆಚ್ಚಿಸುವುದಕ್ಕಾಗಿ ರೈತರು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಕರ್ನಾಟಕದಲ್ಲಿ ಅನುಷ್ಠಾನಕ್ಕೆ ಬಂದಿರುವ ಆನ್‌ಲೈನ್ ಮಾರುಕಟ್ಟೆಯನ್ನು (ಇ–ಮಾರುಕಟ್ಟೆ) ಮಾದರಿಯಾಗಿಟ್ಟುಕೊಂಡು ಕೇಂದ್ರ ಸರ್ಕಾರ ಇ–ರಾಷ್ಟ್ರೀಯ ಕೃಷಿ ಮಾರುಕಟ್ಟೆ ಆರಂಭಿಸಿದೆ. ಈ ವೆಬ್‌ಸೈಟ್ ಮೂಲಕ ಎಂಟು ರಾಜ್ಯಗಳ ರೈತರು 25 ಕೃಷಿ ಉತ್ಪನ್ನಗಳನ್ನು ಆನ್‌ಲೈನ್ ಮೂಲಕ ಮಾರಾಟ ಮಾಡಬಹುದು. 2018ರ ಮಾರ್ಚ್ ಒಳಗಾಗಿ ಸರ್ಕಾರವು ದೇಶದ 585 ಸಗಟು ಮಾರುಕಟ್ಟೆಗಳನ್ನು ಪರಸ್ಪರ ಸಂಪರ್ಕಿಸಲು ಚಿಂತನೆ ನಡೆಸಿದೆ.

# ಸಾಲುದ್ದದ ಸುದ್ದಿಗಳು



**ಭಾರತದ ಜಿಮ್ನಾಸ್ಟಿಕ್ ಸ್ಪರ್ಧಿ ದೀಪಾ ಕರ್ಮಾಕರ್ ಅವರು ರಿಯೊ ಒಲಿಂಪಿಕ್ ಅರ್ಹತೆ ಪಡೆದಿದ್ದು, ಭಾರತ ಮಹಿಳಾ ಜಿಮ್ನಾಸ್ಟಿಕ್‌ನಲ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಬ್ರೆಜಿಲ್‌ನಲ್ಲಿ ನಡೆದ ಒಲಿಂಪಿಕ್ ಅರ್ಹತಾ ಸುತ್ತಿನಲ್ಲಿ 22 ವರ್ಷದ ದೀಪಾ ಆರ್ಟಿಸ್ಟಿಕ್ ವಿಭಾಗದಲ್ಲಿ ಒಟ್ಟು 52.698 ಪಾಯಿಂಟ್‌ಗಳನ್ನು ಕಲೆ ಹಾಕಿದ್ದಾರೆ. ಈ ಮೂಲಕ ಜಿಮ್ನಾಸ್ಟಿಕ್‌ನಲ್ಲಿ ಒಲಿಂಪಿಕ್‌ಗೆ ಅರ್ಹತೆ ಗಿಟ್ಟಿಸಿದ ಭಾರತದ ಮೊಟ್ಟ ಮೊದಲ ಮಹಿಳೆ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. 52 ವರ್ಷಗಳ ಸುದೀರ್ಘ ಇತಿಹಾಸದಲ್ಲಿ ಒಲಿಂಪಿಕ್‌ನ ಜಿಮ್ನಾಸ್ಟಿಕ್ ವಿಭಾಗದಲ್ಲಿ ಇದುವರೆಗೂ ಭಾರತದ ಯಾವುದೇ ಮಹಿಳೆ ಸ್ಪರ್ಧಿಸಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದಾಗಿನಿಂದ ಈತನಕ ಭಾರತದ ಒಟ್ಟು 11 ಪುರುಷ ಜಿಮ್ನಾಸ್ಟ್‌ಗಳು (1952ರಲ್ಲಿ ಇಬ್ಬರು, 1956ರಲ್ಲಿ 3 ಹಾಗೂ 1964ರಲ್ಲಿ 6 ಜನರು) ಒಲಿಂಪಿಕ್‌ನಲ್ಲಿ ಪಾಲ್ಗೊಂಡಿದ್ದರು. ಆದರೆ, ಈವರೆಗೂ ಭಾರತದ ಯಾವುದೇ ಮಹಿಳಾ ಸ್ಪರ್ಧಿ ಈ ಸಾಧನೆ ಮಾಡಿರಲಿಲ್ಲ.**

ಭಾರತ 7,500 ಕಿ.ಮೀ. ವಿಸ್ತೀರ್ಣದ ಕರಾವಳಿ ಪ್ರದೇಶವನ್ನು ಹೊಂದಿದ್ದು, ಅದನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಲು 'ಸಾಗರಮಾಲಾ ಯೋಜನೆ'ಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಕರಾವಳಿ ತೀರದ ಜತೆಗೆ 14,426 ಕಿ.ಮೀ. ಉದ್ದದ ಒಳನಾಡು ಜಲಸಾರಿಗೆ ಹೊಂದಿದ್ದರೂ ಈವರೆಗೆ ಇವುಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡಿಲ್ಲ. ಕಡಲತಡಿಯ ಮೂಲಸೌಕರ್ಯ ಕಳಪೆಯಾಗಿದ್ದು, ಅದನ್ನು ಕೂಡಲೇ ಸರಿಪಡಿಸಬೇಕಾದ ಅಗತ್ಯವನ್ನು ಈ ವರ್ಷದ ಆರ್ಥಿಕ ಸಮೀಕ್ಷೆ ಕೂಡ ಪ್ರತಿಪಾದಿಸಿತ್ತು. ಪ್ರಸಕ್ತ ಬಂದರುಗಳು ದೇಶದ ಶೇ. 95ರಷ್ಟು ಸರಕು ಸಾಗಣೆಯನ್ನು ನಿಭಾಯಿಸುತ್ತವೆ. ಅವುಗಳ ಒಟ್ಟು ಸರಕು ಸಾಗಣೆ ಸಾಮರ್ಥ್ಯ ವಾರ್ಷಿಕ 140 ಕೋಟಿ ಟನ್‌ಗಳಷ್ಟಿದೆ. ಇದನ್ನು ಮುಂದಿನ ಒಂದು ದಶಕದಲ್ಲಿ 300 ಕೋಟಿ ಟನ್‌ಗೆ ಏರಿಸುವ ಗುರಿ ಹೊಂದಿದೆ. 1950ರಿಂದ ಈ ತನಕ ಭಾರತದಲ್ಲಿ ಒಂದೇ ಒಂದು ಹೊಸ ಬಂದರು ನಿರ್ಮಾಣವಾಗಿಲ್ಲ. ಹೀಗಾಗಿ ಕೇಂದ್ರ ಐದು ಹೊಸ ಬಂದರುಗಳನ್ನು ಸ್ಥಾಪಿಸಲು ನಿರ್ಧರಿಸಿದೆ. ಈಗಿರುವ 12 ಪ್ರಮುಖ ಬಂದರುಗಳು ಹಾಗೂ 200 ಸಣ್ಣ ಬಂದರುಗಳನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸಬೇಕಾದ ಅಗತ್ಯವಿದೆ.



**ಕಳೆದ 25 ವರ್ಷಗಳಿಂದ ಪಾಕಿಸ್ತಾನ ಜೈಲಿನಲ್ಲಿದ್ದ ಚಂಡೀಗಢದ 50 ವರ್ಷದ ಕೃಪಾಲ್ ಸಿಂಗ್ ಅವರು ನಿಗೂಢವಾಗಿ ಸಾವನ್ನಪ್ಪಿರುವ ಘಟನೆ ನಡೆದಿದೆ. 1992ರಲ್ಲಿ ವಾಘಾ ಗಡಿ ಉಲ್ಲಂಘನೆ ಆರೋಪದ ಅಡಿ ಕೃಪಾಲ್ ಸಿಂಗ್ ಅವರನ್ನು ಬಂಧಿಸಲಾಗಿತ್ತು. ತರುವಾಯ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ನಡೆದ ಸರಣಿ ಬಾಂಬ್ ಸ್ಫೋಟದ ಆರೋಪದ ಮೇಲೆ ಮರಣದಂಡನೆ ವಿಧಿಸಲಾಗಿತ್ತು. ಸಾವಿಗೆ ಸಂಬಂಧಿಸಿದಂತೆ ಜಿಲ್ಲಾ ನ್ಯಾಯಾಧೀಶರ ಸಲಹೆ ಆಧಾರದಲ್ಲಿ ಕೆಲವು ಕೈದಿಗಳ ಹೇಳಿಕೆ ಪಡೆಯಲಾಗಿದೆ. ಕೃಪಾಲ್ ಸಿಂಗ್ ಪಂಜಾಬ್ ರಾಜ್ಯದ ಗುರುದಾಸ್ ಪುರ ಜಿಲ್ಲೆಯ ಮುಸ್ತಫಾಬಾದ್ ಹಳ್ಳಿಯವರು. ಬೆಳಗ್ಗೆ ಹೃದಯಾಘಾತ ಸಂಭವಿಸಿ ಸಿಂಗ್ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ಕೃಪಾಲ್ ಸಿಂಗ್ ಮನೆಯವರು ಇದನ್ನು ಅಲ್ಲಗಳೆದಿದ್ದಾರೆ. ಅಲ್ಲದೆ ಮೃತದೇಹದಲ್ಲಿ ಕಿಡ್ನಿ, ಹೃದಯ ಇಲ್ಲದಿರುವುದು ಭಾರತದ ಆಕ್ರೋಶಕ್ಕೆ ಕಾರಣವಾಗಿದೆ.**

## ಗುಡಗಾಂವ್ ಅಲ್ಲ ಗುರುಗ್ರಾಮ




ಹರಿಯಾಣದ ಪ್ರಮುಖ ಉದ್ಯಮ ಕೇಂದ್ರ ಗುಡಗಾಂವ್‌ಗೆ 'ಗುರುಗ್ರಾಮ್' ಎಂದು ಮರು ನಾಮಕರಣ ಮಾಡಲು ಹರ್ಯಾಣ ಸರ್ಕಾರ ನಿರ್ಧರಿಸಿದೆ. ಗುಡಗಾಂವ್ ಹೆಸರನ್ನು ಗುರುಗ್ರಾಮ್ ಎಂದು ಬದಲಿಸುವುದು ಸೂಕ್ತ ಎಂದು ವಿವಿಧ ಸಂಘಟನೆಗಳು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದವು. ಇದರ ಆಧಾರದ ಮೇಲೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಹರಿಯಾಣ ಭಗವದ್ಗೀತೆಯ ಐತಿಹಾಸಿಕ ನೆಲ. ಗುಡಗಾಂವ್ ಭಗವದ್ಗೀತೆ ಸೇರಿದಂತೆ ವಿದ್ಯಾಭ್ಯಾಸದ ಪ್ರಮುಖ ಕೇಂದ್ರವಾಗಿತ್ತು ಎಂದು ಸರ್ಕಾರ ತಿಳಿಸಿದೆ.

## ಬ್ಯಾಟರಿ ಮಿತವ್ಯಯ




ಹೊಸ ತಂತ್ರಜ್ಞಾನಗಳು ಸ್ಮಾರ್ಟ್‌ಫೋನ್‌ಗಳಲ್ಲಿ ವಿವಿಧ ರೀತಿಯ ವೈಶಿಷ್ಟ್ಯಗಳನ್ನು ಸೇರಿಸುತ್ತಲೇ ಬಂದಿವೆ. ಇಂಟರ್ನೆಟ್, ಟಚ್ ಪರದೆ, ಉತ್ತಮ ಡಿಸ್ಪ್ಲೇ, ವಿವಿಧ ಆಪ್‌ಗಳು ಎಲ್ಲವೂ ಮೊಬೈಲ್ ಬಳಕೆಯಲ್ಲಿನ ಸಾಧ್ಯತೆಗಳನ್ನು ಹೆಚ್ಚಿಸಿದೆ. ಆದರೆ ಇವೆಲ್ಲವೂ ಬ್ಯಾಟರಿಯ ಮೇಲೆ ಹೊರೆತ ನೀಡಿವೆ. ದಿನಪೂರ್ತಿ ಬ್ಯಾಟರಿ ಉಳಿಸುವುದೇ ಒಂದು ಸವಾಲಾಗಿದೆ. ಸಾಮಾನ್ಯವಾಗಿ ಮೊಬೈಲ್ ಪರದೆ, ಇಂಟರ್ನೆಟ್, ಕರೆ, ಆಟಗಳು, ವಿಡಿಯೋ, ಧ್ವನಿ – ಹೀಗೆ ನೀವು ಬಳಸುವ ಸವಲತ್ತುಗಳ ಮೇಲೆ ಆಧರಿಸಿ ಅರ್ಧದಿಂದ ಮೂರು ದಿನಗಳ ವರೆಗೆ ಒಮ್ಮೆ ಮಾಡಿದ ಚಾರ್ಜ್ ಉಳಿಯಬಹುದು. ಈ ಸಲಹೆಗಳನ್ನು ಬಳಸಿ ಬ್ಯಾಟರಿ ಮಿತವ್ಯಯ ಮಾಡಿ:

- ಪದೇ ಪದೇ ಅನ್‌ಲಾಕ್ ಮಾಡಿ ಮೊಬೈಲ್ ನೋಡುವ ಅಭ್ಯಾಸ ಕಡಿಮೆ ಮಾಡಿ. ನೀವು ಯಾವುದೇ ಗೇಮ್/ವಿಡಿಯೋ ಬಳಸದಿದ್ದರೂ ಕೇವಲ ಪರದೆಯ ಬೆಳಕಿಗಾಗಿ ಸಾಕಷ್ಟು ಬ್ಯಾಟರಿ ವ್ಯಯವಾಗುತ್ತದೆ. ಈಗಿನ ಫೋನುಗಳ ಪರದೆ ಸಾಕಷ್ಟು ದೊಡ್ಡದಾಗಿರುತ್ತದೆ.
- ದೂರ ಪ್ರಯಾಣದ ಸಂದರ್ಭದಲ್ಲಿ, ನಿದ್ರಿಸುವಾಗ ಮೊಬೈಲ್ ಅಗತ್ಯವಿಲ್ಲದಿದ್ದರೆ ಆಫ್ ಮಾಡಿ. ಪ್ರಯಾಣಿಸುವಾಗ ಮೊಬೈಲ್ ರೇಂಜ್ ಬದಲಾಗುತ್ತಿರುತ್ತದೆ ಮತ್ತು ಸಂಪರ್ಕದ ಹುಡುಕುವಿಕೆಗಾಗಿ ಬ್ಯಾಟರಿ ವ್ಯಯವಾಗುತ್ತಿರುತ್ತದೆ.
- ಪರದೆಯ ಕಾಂತಿಯನ್ನು ಕಡಿಮೆಗೊಳಿಸಿ. ಬಿಸಿಲಿನಲ್ಲಿ ಪರದೆ ಸರಿಯಾಗಿ ಕಾಣಿಸುವುದಿಲ್ಲವಾದರೆ ಅಗತ್ಯವೆನಿಸಿದಾಗ ಮಾತ್ರ ಜಾಸ್ತಿ ಮಾಡಿ.
- ವೈಫೈ, ಬ್ಲೂಟೂತ್ ಇತ್ಯಾದಿಗಳನ್ನು ಅಗತ್ಯವಿದ್ದಾಗ ಮಾತ್ರ ಆನ್ ಮಾಡಿ.
- ಚಾರ್ಜ್ ಮಾಡುವ ಅವಕಾಶವಿಲ್ಲದಿದ್ದರೆ ಹೆಚ್ಚು ಸಮಯ ಬ್ಯಾಟರಿ ಉಳಿಸಲು 3G ಬದಲು 2G ಬಳಸಿ. ನೀವು ಇಂಟರ್ನೆಟ್ ಬಳಸದೇ ಕರೆಗಳನ್ನು ಮಾತ್ರ ಮಾಡುವವರಾದರೂ ಈ ಬದಲಾವಣೆ ಸಾಕಷ್ಟು ವ್ಯತ್ಯಾಸವನ್ನು ಮಾಡುತ್ತದೆ.
- APPಗಳ ಸೂಚನೆ/notificationಗಳನ್ನು ಅಗತ್ಯವಿಲ್ಲವಾದರೆ ಆಫ್ ಮಾಡಿ. ಉದಾಹರಣೆಗೆ ಫೇಸ್–ಬುಕ್ ಎಲ್ಲಾ ಲೈಕ್, ಕಮೆಂಟ್‌ಗಳ ಬಗ್ಗೆ ಮಾಹಿತಿ ರವಾನಿಸುತ್ತಲೇ ಇದ್ದರೆ ಬ್ಯಾಟರಿ ಖರ್ಚಾಗುತ್ತಿರುತ್ತದೆ. ವಾಟ್ಸಾಪಿನಲ್ಲಿ ಗ್ರೂಪ್ ಮಾಹಿತಿಯ notification ಬೇಕಾಗಿಲ್ಲ, ಚಿತ್ರಗಳು ತಾನೇ ಡೌನ್‌ಲೋಡ್ ಆಗುವುದು ಬೇಡ ಅಂತೆಲ್ಲ ಆಯ್ಕೆ ಮಾಡಲು ಅವಕಾಶವಿದೆ.
- ಬ್ಯಾಟರಿ ಸೇವಿಂಗ್/ಇಕೋ ಮೋಡ್ ಎಂಬ ಆಯ್ಕೆಯನ್ನು ಹಲವು ಮೊಬೈಲುಗಳು ನೀಡುತ್ತವೆ. ಚಾರ್ಜ್ ಕಡಿಮೆಯಿದ್ದಾಗ ಆ ಮೋಡ್‌ಗೆ ಬದಲಾಯಿಸುವ ಮೂಲಕ ಹಿನ್ನೆಲೆಯಲ್ಲಿ ಕೆಲಸಮಾಡುವ ಕೆಲವು appಗಳನ್ನು ತಡೆಹಿಡಿಯಬಹುದು.
- ಹೊಸ ಮೊಬೈಲ್/ಗ್ಯಾಜೆಟ್ ಕೊಂಡಾಗ ಮೊದಲ ಬಾರಿ ಅದನ್ನು ಸಂಪೂರ್ಣ ಚಾರ್ಜ್ ಮಾಡಿ ನಂತರ ಬಳಸಿ.
- ಅಗತ್ಯವಿಲ್ಲದಿರುವ ಆಪ್‌ಗಳನ್ನು ತೆಗೆದುಹಾಕಿ. ಹಲವು ಆಪ್‌ಗಳು ಹಿನ್ನೆಲೆಯಲ್ಲಿ ರನ್ ಆಗಿ ಬ್ಯಾಟರಿ ಕಬಳಿಸುತ್ತಿರುತ್ತವೆ.
- ನಿಮ್ಮ ಆಪರೇಟಿಂಗ್ ಸಿಸ್ಟಂ ಹಾಗೂ ಎಲ್ಲ ಕಿರುತಂತ್ರಾಂಶಗಳನ್ನು ತಾಜಾ ಆವೃತ್ತಿಗೆ ಅಪ್–ಗ್ರೇಡ್ ಮಾಡಿ. ಸಾಮಾನ್ಯವಾಗಿ ಹೊಸ ಆವೃತ್ತಿಗಳಲ್ಲಿ ಅನೇಕ ಬ್ಯಾಟರಿ ವ್ಯಯವಾಗುವ ಸಮಸ್ಯೆಗಳನ್ನು ಪರಿಹರಿಸುತ್ತಿರುತ್ತಾರೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
1-5-2016




# ಆರೆಸ್ಸೆಸ್‌ನಿಂದ ವಾರಾಂತ್ಯದಲ್ಲಿ ಮಕ್ಕಳಿಗಾಗಿ ಬಾಲಗೋಕುಲಂ



ಮಕ್ಕಳಿಗೆ ದೇಶದ ಸಂಸ್ಕೃತಿ, ಇತಿಹಾಸ, ಪುರಾಣ ಕಥೆಗಳು, ನೈತಿಕತೆಯ ಪಾಠ ಹೇಳುವ ಸಲುವಾಗಿ ಹಲವು ದಶಕಗಳ ಹಿಂದೆಯೇ ಕರ್ನಾಟಕ ಮತ್ತು ಕೇರಳದ ಕೆಲ ಭಾಗಗಳಲ್ಲಿ ಜಾರಿಯಲ್ಲಿದ್ದ 'ಬಾಲಗೋಕುಲಂ' ಹೆಸರಿನ ತರಗತಿಯನ್ನು ದೇಶದಾದ್ಯಂತ ವಿಸ್ತರಿಸಲು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ನಿರ್ಧರಿಸಿದೆ.

ಪ್ರತಿ ಭಾನುವಾರ ದೇಶದ ಮಹಾನಗರಗಳಲ್ಲಿ 18 ವರ್ಷದೊಳಗಿನ ಮಕ್ಕಳಿಗಾಗಿ 'ಬಾಲಗೋಕುಲಂ' ತರಗತಿಗಳನ್ನು ಆಯೋಜಿಸಲು ಸಂಘ ನಿರ್ಧರಿಸಿದ್ದು, ಜೂ. 1 ರಿಂದ ಪ್ರಮುಖ ನಗರಗಳ 5,000 ಕೇಂದ್ರಗಳಲ್ಲಿ ತರಗತಿ ಆರಂಭಗೊಳ್ಳಲಿದೆ. ಮಕ್ಕಳಲ್ಲಿ ನೈತಿಕ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವುದು, ಮಾನವೀಯ ಗುಣಗಳನ್ನು ಬೆಳೆಸುವ ನಿಟ್ಟಿನಲ್ಲಿ ಈ ತರಗತಿ ಮಹತ್ವದ ಪಾತ್ರವಹಿಸಲಿವೆ.

ಬಾಲಗೋಕುಲಂ ಹೆಸರಿನ ತರಗತಿಗಳು ಮೊದಲು 1975ರಲ್ಲಿ ಕೇರಳದಲ್ಲಿ ಪ್ರಾರಂಭವಾಗಿತ್ತು. ಇದು 1979ರಲ್ಲಿ ಕರ್ನಾಟಕದಲ್ಲಿ, ಪ್ರಮುಖವಾಗಿ ದಕ್ಷಿಣ ಕನ್ನಡ ಮತ್ತು ಕಾಸರಗೋಡು ಪ್ರದೇಶಗಳಲ್ಲಿ ಆರಂಭವಾದವು. ಪ್ರಸ್ತುತ ರಾಜ್ಯದಲ್ಲಿ 1,140 ಬಾಲಗೋಕುಲಂಗಳನ್ನು ನಡೆಸಲಾಗುತ್ತಿದೆ. 5–6 ವರ್ಷಗಳಿಂದೀಚೆಗೆ ನಿಃಶುಲ್ಕವಾಗಿ ಬೆಂಗಳೂರಿನಲ್ಲಿ 'ಬಾಲಭಾರತಿ' ಎಂಬ ತರಗತಿಗಳನ್ನೂ ಶನಿವಾರ, ಭಾನುವಾರ ನಡೆಸಲಾಗುತ್ತಿದೆ.

# ಸಂಪ್ರದಾಯದ ಹೆಸರಲ್ಲಿ ನಿರ್ಬಂಧ ಬೇಡ: ಆರ್‌ಎಸ್‌ಎಸ್



ದೇವಾಲಯಗಳಿಗೆ ಪ್ರವೇಶ ನೀಡದಂತೆ ಮಹಿಳೆಯರಿಗೆ ನಿರ್ಬಂಧ ವಿಧಿಸುವುದು ನ್ಯಾಯಸಮ್ಮತವಲ್ಲ. ದೇವಸ್ಥಾನದ ಆಡಳಿತ ಮಂಡಳಿಗಳು ಈ ಬಗ್ಗೆ ತಮ್ಮ ಮನಃಸ್ಥಿತಿಯನ್ನು ಬದಲಿಸಿಕೊಳ್ಳಬೇಕು ಎಂದು ಆರೆಸ್ಸೆಸ್‌ನ ಸರಕಾರ್ಯವಾಹ ಭಯ್ಯಾಜಿ ಜೋಶಿ ಹೇಳಿದ್ದಾರೆ.

ದೇಶದ ನೂರಾರು ದೇವಾಲಯಗಳಿಗೆ ಮಹಿಳೆಯರು ಪ್ರವೇಶಿಸುತ್ತಾರೆ. ಆದರೆ ಕೆಲವು ಕಡೆ ಮಾತ್ರ ವಿವಾದ ಮಾಡಲಾಗುತ್ತಿದೆ. ಕೆಟ್ಟ ಸಂಪ್ರದಾಯವನ್ನು ಕೆಲವು ದೇವಾಲಯಗಳಲ್ಲಿ ಪಾಲಿಸಲಾಗುತ್ತಿದೆ. ಮಹಿಳೆಯರಿಗೆ ಪ್ರವೇಶ ನೀಡದಿರಲು ತಿಳಿವಳಿಕೆಯ ಕೊರತೆ ಇದೆ. ಮಹಿಳೆಯರು ಇಂದು ವೇದ ಅಧ್ಯಯನ, ಪೂಜೆ ಸೇರಿದಂತೆ ಹಲವು ಧಾರ್ಮಿಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇಂತಹ ಸೂಕ್ಷ್ಮ ವಿಷಯಗಳನ್ನು ಚರ್ಚೆ ಮತ್ತು ಮಾತುಕತೆಯ ಮೂಲಕ ಪರಿಹರಿಸಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

# ಪಿಒಜೆಕೆನಲ್ಲಿ ಪಾಕ್ ವಿರೋಧಿ ಬೃಹತ್ ಪ್ರತಿಭಟನೆ




ಪಾಕಿಸ್ತಾನ ಆಕ್ರಮಿತ ಜಮ್ಮು–ಕಾಶ್ಮೀರದಲ್ಲಿ ಮತ್ತೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಪಾಕಿಸ್ತಾನದ ತಾರತಮ್ಯ ಧೋರಣೆ ವಿರೋಧಿಸಿ ಪಾಕ್ ಆಕ್ರಮಿತ ಜಮ್ಮು ಕಾಶ್ಮೀರದ ಸಹಸ್ರಾರು ಯುವಕರು ಸಿಡಿದೆದ್ದು, ಪಾಕಿಸ್ತಾನ ವಿರೋಧಿ ಘೋಷಣೆಗಳನ್ನು ಕೂಗಿ ಪ್ರತಿಭಟಿಸಿದರು. ಮುಜಫರಾಬಾದ್ ಪ್ರಾಂತ್ಯದಲ್ಲಿ ಜಮ್ಮು–ಕಾಶ್ಮೀರ ರಾಷ್ಟ್ರೀಯ ವಿದ್ಯಾರ್ಥಿ ಸಂಘಟನೆ ಹಾಗೂ ಜಮ್ಮು–ಕಾಶ್ಮೀರ ರಾಷ್ಟ್ರೀಯ ಅವಾಮಿ ಪಾರ್ಟಿ ಕಾರ್ಯಕರ್ತರು ರ‍್ಯಾಲಿ ನಡೆಸಿ, ಪಾಕಿಸ್ಥಾನ ಸರಕಾರ ಹಾಗೂ ಸ್ಥಳೀಯ ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಆಕ್ರಮಿತ ಕಾಶ್ಮೀರವನ್ನು ಪಾಕ್ ಹಿಡಿತದಿಂದ ವಿಮುಕ್ತಿಗೊಳಿಸಿ ಪ್ರತ್ಯೇಕ ಕಾಶ್ಮೀರ ಬೇಡಿಕೆಗೆ ಆಗ್ರಹಿಸಿ ಘೋಷಣೆ ಕೇಳಿಬಂತು.

# ಲಾತೂರ್‌ಗೆ 350 ಕಿ.ಮೀ ದೂರದಿಂದ ಬಂತು ರೈಲ್ ನೀರು



ನೂರು ವರ್ಷಗಳಲ್ಲೇ ಭೀಕರ ಬರಗಾಲಕ್ಕೆ ತುತ್ತಾಗಿರುವ ಮಹಾರಾಷ್ಟ್ರದ ಮರಾಠವಾಡ ಪ್ರಾಂತ್ಯದಲ್ಲಿರುವ ಲಾತೂರ್ ನಗರಕ್ಕೆ 10 ರೈಲು ಬೋಗಿಗಳ ಮೂಲಕ 5 ಲಕ್ಷ ಲೀಟರ್ ನೀರು ಸರಬರಾಜಿಗೆ ವ್ಯವಸ್ಥೆ ಮಾಡಲಾಗಿದೆ. ಹಲವು ದಿನಗಳಿಂದ ನೀರಿಗಾಗಿ ಬವಣೆ ಪಟ್ಟಿದ್ದ ಜನರ ಬೇಗೆ ತಣಿಸಲು ಮುಂದಾದ ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಈ ಕ್ರಮ ವ್ಯಾಪಕ ಶ್ಲಾಘನೆಗೆ ಪಾತ್ರವಾಗಿದೆ. 'ನೀರು ರೈಲು' ಬರುತ್ತಿದ್ದಂತೆ ಜನರು ಪೂಜೆ ಸಲ್ಲಿಸಿ ಬರ ಮಾಡಿಕೊಂಡಿದ್ದಾರೆ.

ಮಹಾರಾಷ್ಟ್ರದ ಮೀರಜ್ ಬಳಿ ಇರುವ ಉಜನಿ ಜಲಾಶಯದಿಂದ ಮೀರಜ್ ನಿಲ್ದಾಣಕ್ಕೆ ಪೈಪ್‌ಲೈನ್ ಮೂಲಕ ನೀರು ಸಾಗಿಸಿ, ಶುದ್ಧೀಕರಿಸಿ, ಅದನ್ನು ತಲಾ 50 ಸಾವಿರ ಲೀಟರ್ ಸಾಮರ್ಥ್ಯದ 10 ಬೋಗಿಗಳಿಗೆ ತುಂಬಿ ಲಾತೂರ್‌ಗೆ ಸಾಗಿಸಲಾಗಿದೆ. ನೀರು ಹೊತ್ತ ಮೊದಲ ರೈಲು 350 ಕಿ.ಮೀ. ದೂರವನ್ನು ಸುದೀರ್ಘ 18 ತಾಸುಗಳಲ್ಲಿ ಕ್ರಮಿಸಿದೆ. ನೀರು ಸಂಗ್ರಹಿಸಲು ಲಾತೂರ್ ನಿಲ್ದಾಣದ ಬಳಿ ಪ್ಲಾಸ್ಟಿಕ್ ಶೀಟ್ ಅಳವಡಿಸಿದ ಬೃಹತ್ ಬಾವಿ ಸೃಷ್ಟಿಸಿ, ಬೋಗಿಯಿಂದ ನೀರನ್ನು ನೇರವಾಗಿ ತುಂಬಿಸಲಾಗಿದೆ.

5 ಲಕ್ಷ ಜನಸಂಖ್ಯೆ ಇರುವ ಲಾತೂರ್‌ಗೆ ನಿತ್ಯ 80 ದಶಲಕ್ಷ ಲೀಟರ್ ನೀರು ಬೇಕಾಗಿದೆ. ಆದರೆ ಆ ಭಾಗಕ್ಕೆ ನೀರು ಪೂರೈಸುವ 11 ಡ್ಯಾಂಗಳ ಪೈಕಿ 7 ಅಣೆಕಟ್ಟೆಗಳು ಬತ್ತಿ ಹೋಗಿರುವುದರಿಂದ 20 ದಶಲಕ್ಷ ಲೀಟರ್ ನೀರು ಮಾತ್ರವೇ ಲಭ್ಯವಾಗುತ್ತಿದೆ. ಆ ಪೈಕಿ 15 ದಶಲಕ್ಷ ಲೀಟರ್ ನೀರು ಪೂರೈಕೆಗೆ ಲಾತೂರ್ ನಗರಾಡಳಿತ ಕೊಳವೆ ಬಾವಿಗಳನ್ನು ಅವಲಂಬಿಸಿದೆ. ಕುಡಿಯುವ ನೀರಿನ ತೀವ್ರ ತೊಂದರೆ ಇರುವ ಹಿನ್ನೆಲೆಯಲ್ಲಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗಳು ನಿಂತುಹೋಗಿವೆ. ವಾರ ಅಥವಾ ಹದಿನೈದು ದಿನಕ್ಕೊಮ್ಮೆ ಮಾತ್ರ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಟ್ಯಾಂಕರ್ ನೀರು ಕಾಳಸಂತೆಯಲ್ಲಿ ಮಾರಾಟವಾಗುತ್ತಿತ್ತು. ಇದರಿಂದ ಎಚ್ಚೆತ್ತ ಸರ್ಕಾರ ಲಾತೂರ್‌ಗೆ ನೀರು ಪೂರೈಕೆ ಮಾಡುವ ಸಲುವಾಗಿ ರಾಜಸ್ಥಾನದ ಕೋಟಾ ರೈಲ್ವೆ ಕಾರ್ಯಾಗಾರದಿಂದ 50 ರೈಲು ಟ್ಯಾಂಕರ್‌ಗಳನ್ನು ತರಿಸಿಕೊಂಡಿದೆ.

# ಇಸ್ಲಾಂ ಧರ್ಮದಲ್ಲೂ ನ್ಯಾಯಾಂಗ ಹಸ್ತಕ್ಷೇಪ ಮಾಡಲಿ: ಸಾಕ್ಷಿ ಮಹಾರಾಜ್



ನ್ಯಾಯಾಂಗ ಹೇಗೆ ಹಿಂದೂ ಧರ್ಮದಲ್ಲಿ ಹಸ್ತಕ್ಷೇಪ ನಡೆಸುತ್ತದೆಯೋ ಹಾಗೆಯೇ ಅದು ಇಸ್ಲಾಂ ಧರ್ಮದಲ್ಲಿ ಹಸ್ತಕ್ಷೇಪ ನಡೆಸಿ ಮುಸ್ಲಿಂ ಮಹಿಳೆಯರ ಮೇಲಿನ ಶೋಷಣೆ, ದೌರ್ಜನ್ಯ, ಅಸಮಾನತೆ ಇತ್ಯಾದಿ ಅಸಾಂವಿಧಾನಿಕ ಚಟುವಟಿಕೆಗಳನ್ನು ನಿವಾರಿಸಬೇಕು ಎಂದು ಬಿಜೆಪಿ ಸಂಸದ ಸಾಕ್ಷಿ ಮಹಾರಾಜ್ ಆಗ್ರಹಿಸಿದ್ದಾರೆ.

ಇಸ್ಲಾಂ ಧರ್ಮದಲ್ಲಿ ಮಹಿಳೆಯರನ್ನು ಕಾಲಿನ ಚಪ್ಪಲಿಯಂತೆ ಕಾಣಲಾಗುತ್ತಿದೆ. ಅಗತ್ಯವಿದ್ದಾಗ ಕಾಲಿಗೆ ಹಾಕಿಕೊಂಡು ಅಗತ್ಯವಿಲ್ಲದಿದ್ದಾಗ ಎತ್ತಿ ಹೊರಗೆಸೆಯುವಂತೆ ಮುಸ್ಲಿಂ ಮಹಿಳೆಯರನ್ನು ನಡೆಸಿಕೊಳ್ಳಲಾಗುತ್ತಿದೆ. ಮುಸ್ಲಿಂ ಮಹಿಳೆಯರು ನಮ್ಮ ತಾಯಿ–ಸೋದರಿಯರು ಇದ್ದಂತೆ. ಅವರು ಕೂಡ ಶೋಷಣೆ, ಅನ್ಯಾಯ, ಅಧರ್ಮವನ್ನು ಎದುರಿಸುತ್ತಿದ್ದಾರೆ. ನ್ಯಾಯಾಂಗವು ಹಿಂದು ಧರ್ಮದಲ್ಲಿ ಹಸ್ತಕ್ಷೇಪ ಮಾಡಿದಂತೆ ಇಸ್ಲಾಂನಲ್ಲೂ ಹಸ್ತಕ್ಷೇಪ ಮಾಡಬೇಕು. ಮಹಿಳೆಯರಿಗೂ ನಮಾಜ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ದೇಶದ ಪ್ರತಿಯೊಬ್ಬ ಪ್ರಜೆಗೂ ಸಮಾನವಾದ ಹಕ್ಕುಗಳಿವೆ. ದೇಶವು ಸಂವಿಧಾನದ ಪ್ರಕಾರ ನಡೆಯಬೇಕೇ ಹೊರತು ಫತ್ವಾಗಳ ಪ್ರಕಾರ ಅಲ್ಲ. ಇದನ್ನು ಸರಕಾರ ಮತ್ತು ನ್ಯಾಯಾಂಗ ಖಾತರಿಪಡಿಸಬೇಕು ಎಂದು ಸಾಕ್ಷಿ ಮಹಾರಾಜ್ ಹೇಳಿದ್ದಾರೆ.

# ಪಾಕ್ ಹಿಂದುಗಳ ನೆರವಿಗೆ ನಿಂತ ಕೇಂದ್ರ

ಹಿಂಸಾಚಾರ, ದೌರ್ಜನ್ಯ ಮತ್ತಿತರ ಪ್ರತಿಕೂಲ ಪರಿಸ್ಥಿತಿಗೆ ಬೇಸತ್ತು ಪಾಕಿಸ್ತಾನ ತೊರೆದು ಭಾರತಕ್ಕೆ ಬಂದು ಅತಂತ್ರ ಸ್ಥಿತಿಯಲ್ಲಿ ಜೀವನ ನಡೆಸುತ್ತಿರುವ ಹಿಂದುಗಳ ರಕ್ಷಣೆಗೆ ಕೇಂದ್ರ ಸರ್ಕಾರ ಮುಂದಾಗಿದೆ. ದೀರ್ಘಾವಧಿ ವೀಸಾ(ಎಲ್‌ಟಿವಿ) ಮೂಲಕ ಭಾರತದಲ್ಲಿ ನೆಲೆಸಿರುವ ಪಾಕಿಸ್ತಾನದ ಹಿಂದುಗಳು ಬ್ಯಾಂಕ್ ಖಾತೆ, ಪ್ಯಾನ್ ಮತ್ತು ಆಧಾರ್ ಕಾರ್ಡ್‌ಗಳನ್ನು ಪಡೆಯುವ ಮೂಲಕ ಆಸ್ತಿ ಖರೀದಿಸುವ ವಿಶೇಷ ಅವಕಾಶವನ್ನು ಮಾಡಿಕೊಡಲು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮುಂದಾಗಿದೆ. ಅಷ್ಟೇ ಅಲ್ಲದೆ, ನೋಂದಣಿ ಶುಲ್ಕವನ್ನು ಭಾರತದ ನಾಗರಿಕರ ಮಾದರಿಯಲ್ಲಿ 15 ಸಾವಿರದಿಂದ ಕೇವಲ 100ಕ್ಕೆ ಇಳಿಸಲು ಕೇಂದ್ರ ನಿರ್ಧರಿಸಿದೆ.

ಭಾರತದಲ್ಲಿ ನೆಲೆಸಿರುವ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ಘಾನಿಸ್ತಾನದ ನಿರಾಶ್ರಿತರ ನಿಖರವಾದ ಸಂಖ್ಯೆ ತಿಳಿದಿಲ್ಲ. ಆದರೆ ಅಧಿಕೃತ ಅಂದಾಜಿನ ಪ್ರಕಾರ ಬಹುತೇಕ ಹಿಂದುಗಳು ಹಾಗೂ ಸಿಖ್ಖರು ಸೇರಿದಂತೆ ಸುಮಾರು ಎರಡು ಲಕ್ಷ ನಿರಾಶ್ರಿತರು ಭಾರತದಲ್ಲಿದ್ದಾರೆ. ಜೋಧ್‌ಪುರ, ಜೈಸಲ್ಮೇರ್, ಜೈಪುರ, ರಾಯ್‌ಪುರ, ಅಹಮದಾಬಾದ್, ರಾಜ್‌ಕೋಟ್, ಕಛ್, ಭೋಪಾಲ್, ಇಂದೋರ್, ಮುಂಬೈ, ನಾಗಪುರ, ಪುಣೆ, ದೆಹಲಿ ಮತ್ತು ಲಖನೌ ಮುಂತಾದ ನಗರಗಳಲ್ಲಿ ಪಾಕಿಸ್ತಾನಿ ಹಿಂದುಗಳಿರುವ ಸುಮಾರು 400 ಶಿಬಿರಗಳಿವೆ.

ರಿಸರ್ವ್ ಬ್ಯಾಂಕ್‌ನಿಂದ ಪೂರ್ವಾನುಮತಿಯಿಲ್ಲದೆ ಬ್ಯಾಂಕ್ ಖಾತೆ ತೆರೆಯಲು ಅವಕಾಶ ನೀಡಲಾಗಿದ್ದು, ಕೆಲವು ಷರತ್ತುಗಳನ್ನಷ್ಟೇ ವಿಧಿಸಲಾಗಿದೆ. ಸ್ವಂತಕ್ಕೆ ಗುಡಿಸಲು ಖರೀದಿಗೆ ಹಾಗೂ ಸ್ವಯಂ ಉದ್ಯೋಗಕ್ಕಾಗಿ ಸ್ಥಳ ಖರೀದಿಗೆ ನಿಗದಿತ ಷರತ್ತುಗಳನ್ನು ಪೂರೈಸಿದರೆ ಆರ್‌ಬಿಐನಿಂದ ಪೂರ್ವಾನುಮತಿ ಪಡೆಯುವ ಆವಶ್ಯಕತೆ ಇರುವುದಿಲ್ಲ. ಇದೇ ರೀತಿ ವಾಹನ ಚಾಲನಾ ಪರವಾನಗಿ, ಪ್ಯಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ಹೊಂದಲು, ಸ್ವಯಂ ಉದ್ಯೋಗ ಅಥವಾ ಭದ್ರತೆಯ ದೃಷ್ಟಿಯಿಂದ ಸುರಕ್ಷಿತವೆನಿಸುವ ವ್ಯವಹಾರ ನಡೆಸಲು ವಿದೇಶಿಯರ ನೋಂದಣಾಧಿಕಾರಿಗಳ ಬಳಿ ಖುದ್ದಾಗಿ ಹಾಜರಾಗಿ ನೋಂದಣಿ ಮಾಡಿಕೊಂಡರೆ ಸಾಕು ಎಂಬ ಷರತ್ತು ವಿಧಿಸಿ ಅಧಿಸೂಚನೆ ಹೊರಡಿಸಲಾಗಿದೆ. ನಿರಾಶ್ರಿತರು ನೆಲೆಸಿರುವ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿ ಮುಕ್ತವಾಗಿ ಓಡಾಡಲು ಅವಕಾಶ ನೀಡುವ ಪ್ರಸ್ತಾಪವೂ ಕೇಂದ್ರದ ಮುಂದಿದೆ. ಪಾಕಿಸ್ತಾನದ ಹಿಂದೂ ನಿರಾಶ್ರಿತರಿಗೆ ಭಾರತದ ಪೌರತ್ವ ನೀಡುವ ಪ್ರಕ್ರಿಯೆಯನ್ನು ಸರಳೀಕರಣ ಮಾಡುವ ಉದ್ದೇಶವೂ ಸರ್ಕಾರದ ಮುಂದಿದೆ ಎನ್ನಲಾಗಿದೆ.


ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ/ನವೀಕರಣ/ವಿಳಾಸ ಬದಲಾವಣೆಗಾಗಿ ಸಂಪರ್ಕಿಸಿ : #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021 ಸಂಪಾದಕೀಯ : 97312 64009